ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)

ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-೧೯. ದೂರವಾಣಿ : (080) 26602802; 26611011

## ಸಂಪಾದಕರು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ಸಂಪುಟ -೨ ಸಂಚಿಕೆ –೯ ವಿರೋಧಿ (ಕಾರ್ತಿಕ-ಮಾರ್ಗಶೀರ್ಷ) ನವೆಂಬರ್ ೨೦೦೯

**Sri VyasaMadhwa**

Volume: 2; Issue: 9 November 2009

## ಶ್ರೀವ್ಯಾಸಸೂಕ್ತಿ

**ವಾಸುದೇವಕಥಾಪ್ರಶ್ನಃ ಪುರುಷಾಂಸ್ತ್ರೀನ್ ಪುನಾತಿ ಹಿ ।**
**ವಕ್ತಾರಂ ಪೃಚ್ಛಕಂ ಶ್ರೋತೄನ್ ತತ್ಪಾದಸಲಿಲೋ ಯಥಾ ॥**

– ಶ್ರೀಮದ್ಭಾಗವತ (೧೦/೧/೧೬)

ಶ್ರೀಹರಿಕಥಾಪ್ರಸಂಗವು ಹೇಳುವವನನ್ನು, ಹೇಳಿಸುವವನನ್ನು ಹಾಗೂ ಕೇಳುವವರನ್ನು ಪಾವನಗೊಳಿಸುವುದು; ಅವನ ಪಾದೋದಕವಾದ ಗಂಗೆಯಂತೆ.

## ಶ್ರೀಮಧ್ವಸೂಕ್ತಿ

**ಸೃಷ್ಟಿರಕ್ಷಾಹೃತಿಜ್ಞಾನನಿಯತ್ಯಜ್ಞಾನಬಂಧನಾನ್ ।**
**ಮೋಕ್ಷಂ ಚ ವಿಷ್ಣುತಸ್ತ್ವೇವ ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥**

– ಮಹಾಭಾರತತಾತ್ಪರ್ಯನಿರ್ಣಯ (೧/೮೨)

ಸೃಷ್ಟಿ, ಸ್ಥಿತಿ, ಸಂಹಾರ, ಜ್ಞಾನ, ನಿಯಮನ, ಅಜ್ಞಾನ, ಬಂಧನಗಳನ್ನು, ಹಾಗೆಯೇ ಮೋಕ್ಷವನ್ನು ವಿಷ್ಣುವಿನಿಂದಲೇ ಎಂದು ತಿಳಿದಾಗ ಮುಕ್ತಿ ಲಭಿಸುವುದು; ಇಲ್ಲವಾದಲ್ಲಿ ಲಭಿಸದು.

# ವಿಷಯಾನುಕ್ರಮಣಿಕೆ

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೩. ಗಾಯತ್ರೀಭಾಷ್ಯರೂಪಃ ಅಸೌ-೯ : ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ೪
೪. ಶ್ರೀಕೃಷ್ಣನಾಮಾರ್ಥಚಂದ್ರಿಕಾ-೮ : ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು ೬
೫. ಭಗವತ್ಪ್ರಿಯ : ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು ೧೩
೬. ಸಂಪಾದಕೀಯ – ಅಗತ್ಯಕ್ಕೆ ಸ್ಪಂದಿಸದ ಅಧ್ಯಯನ ಪದ್ಧತಿ ೧೪
೭. ಪಾಪಪುರುಷನ ವಿಸರ್ಜನೆಯ ಅನುಸಂಧಾನ:ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ ೧೬
೮. ಅಯನಗಳ ಆರಂಭ : ಜಯಂತ ವ್ಯಾಸನಕೆರೆ ೨೦
೧೦. ದ್ರೌಪದೀಸ್ವಯಂವರದ ಅಂತರಾರ್ಥ : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೨೬
೧೧. ಭಗವದ್ಗೀತೆಯ ವೈಶಿಷ್ಟ್ಯ : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೩೦
೧೧. ಭಾವಬೋಧದ ಉಲ್ಲೇಖ ಭಾವದೀಪದಲ್ಲಿ :
ತ್ರಿವೇದಿ ಉಂಡಾರು ಶ್ರೀನಿವಾಸಮೂರ್ತಿ ಆಚಾರ್ಯ ೩೩
೧೨. ಶ್ರೀಕನಕದಾಸರ ವ್ಯಕ್ತಿತ್ವ : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೩೫
೧೩. ಪ್ರತಿಕ್ರಿಯೆ : ಶ್ರೀ ಆದ್ಯ ರಾಮಾಚಾರ್ಯ ೪೧
೧೪. ನವಪ್ರಕಾಶಿತ ಮಾಧ್ವಗ್ರಂಥಗಳು ೪೨
೧೫. ಮಾಸದ ವಿಶೇಷಗಳು ೪೪

*****

## ಚಂದಾ ವಿವರ

ಆಜೀವಚಂದಾ : ರೂ ೫೦೦೦

ಪಂಚವಾರ್ಷಿಕ ಚಂದಾ : ರೂ ೫೦೦; ಬಿಡಿ ಪ್ರತಿ : ರೂ ೧೦

ವಿ.ಸೂ.:–

೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯ-ನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

# ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಅದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

## ಶ್ರೀವ್ಯಾಸರಾಜರ ಸೂಕ್ತಿರತ್ನಗಳು

ರಾಗ : ಮುಖಾರಿ ತಾಳ: ಆದಿ

ಕೃಷ್ಣ ಕೃಷ್ಣ ಕೃಷ್ಣ ಎಂದು ಮೂರುಬಾರಿ ನೆನೆಯಿರೋ ॥ ಪ ॥

ಸಂತುಷ್ಟನಾಗಿ ಮುಕುತಿ ಕೊಟ್ಟು ಮಿಕ್ಕ ಭಾರ ಹೊರುವನೋ ॥ಅ.ಪ.॥

ಸಕಲವೇದಶಾಸ್ತ್ರ ಪಠಿಸಿ ಸಾರವನ್ನು ತಿಳಿದರೇನು
ಮಕರಕುಂಡಲಧರನ ನಾಮಕೆ ಸರಿಯಲ್ಲವೊ ॥ ೧ ॥

ಕಮಲನಾಭನ ಚಿಹ್ನೆಯನ್ನು ಧರಿಸಿಕೊಂಡು ಮೆರೆಯಿರೊ
ಯಮನ ಭಟರು ನೋಡಿ ಅಂಜಿ ಓಡಿ ಹೋಗುವರೋ ॥ ೨ ॥

ಜನ್ಮವೆತ್ತಿ ಮಧ್ವಮತವ ಅನುಸರಿಸಿ ನಡೆಯಿರೊ
ಸುಮ್ಮಾನದಿ ಸಿರಿಕೃಷ್ಣ ತನ್ನ ಲೋಕ ಕೊಡುವನೋ ॥ ೩ ॥

*****

ರಾಗ : ಭೈರವಿ ತಾಳ: ಛಾಪು

ತಡವ್ಯಾಕೆ ಶ್ರೀರಾಮನಾಮ ನುಡಿ ನುಡಿ ॥ ಪ ॥

ಅನ್ಯದೇವತೆಗಳ ಇನ್ನು ಭಜಿಸದಿರು
ಚೆನ್ನಾಗಿ ಹರಿಪದ ಪಿಡಿ ಪಿಡಿ ॥ ೧ ॥

ಮತ್ಸರ ಮುರಿದು ಸುನಿಶ್ಚಲ ಭಕುತಿಲಿ ಅ-
ಚ್ಯುತಪದವನು ಪಿಡಿ ಪಿಡಿ ॥ ೨ ॥

ಕಷ್ಟವ ಕಳೆದು ಮನೋಭೀಷ್ಟವ ಸಲಿಪ ಶ್ರೀ-
ಕೃಷ್ಣನ ಪಾದವ ಪಿಡಿ ಪಿಡಿ ॥ ೩ ॥

*****



# ಗಾಯತ್ರೀಭಾಷ್ಯರೂಪಃ ಅಸೌ - ೯

(ಅನುಗ್ರಹಲೇಖನ)

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು
ಪಲಿಮಾರು ಮಠ, ಉಡುಪಿ.

'ಸ್ತ್ರೀಣಾಂ ಮನೋಜ್ಞಂ ರುಚಿರಸ್ಮಿತೇನ'

ಶ್ರೀಶುಕಾಚಾರ್ಯರು ಹೆಣ್ಮರುಳರೇ? ಭಾಗವತದ ಈ ವಾಕ್ಯ ಓದಿದರೆ ಅಲ್ಲ ಎಂದು ಹೇಳುವಂತಿಲ್ಲ. ತನ್ನ ಮಂದಹಾಸದಿಂದ ಹೆಣ್ಮಕ್ಕಳ ಮನಸ್ಸೆಳದವರು ಎಂದು ತಾನೇ ಈ ವಾಕ್ಯದ ಅರ್ಥ. ಅದಕ್ಕೆ ಪೂರಕವಾಗಿ ಶುಕಾಚಾರ್ಯರ ಪರಮಸೌಂದರ್ಯದ ವಿಶ್ಲೇಷಣೆ ಇಲ್ಲಿ ನಡೆದಿದೆ. ಸೌಂದರ್ಯವನ್ನು ನಿರೂಪಣೆ ಮಾಡುವುದಕ್ಕೋಸ್ಕರವೇ ಅವಯವಗಳ ಚಿತ್ರಣವನ್ನು ನೀಡಿದ್ದಾರೆ. ಯಾವ ಅವಯವ ಯಾವ ಪರಿಮಾಣದಲ್ಲಿ ಇದ್ದರೆ ಸೊಬಗೋ ಅದೇ ಪರಿಮಾಣದಲ್ಲಿ ಅವಯವಗಳು ಕಂಗೊಳಿಸಿದ್ದವು. ವಿಗ್ರಹವನ್ನು ರಚಿಸುವ ಶಿಲ್ಪಿ ಕಡೆದ ಪ್ರತಿಮೆಯ ಪ್ರತಿರೂಪ ಶ್ರೀಶುಕರದ್ದು. ಕಾಣುವ ಕಣ್ಣುಗಳಿಗೆ ಶುಕರ ಅವಯವದಲ್ಲಿ ಕುಂದು ಕೊರತೆಗಳೆ ಕಾಣಿಸುತ್ತಿರಲಿಲ್ಲ. ಸಕಲಲಕ್ಷಣಭರಿತರಾದ ಶ್ರೀವೇದವ್ಯಾಸದೇವರ ಮಾನಸಪುತ್ರ ತಾನೇ! ಹದಿನಾರು ವರ್ಷದ ತಾರುಣ್ಯವು ಶ್ರೀಶುಕರ ದೇಹದಲ್ಲಿ ಕಂಗೊಳಿಸುತ್ತಿತ್ತು. ಅತಿಸುಂದರನಾದ ಮನ್ಮಥನನ್ನು ಅನಂಗನನ್ನಾಗಿಸಿದ ರುದ್ರದೇವರೇ ತಾನೇ ಶುಕಾಚಾರ್ಯರು! ಅಂದ ಮೇಲೆ ಶುಕಚಾರ್ಯರ ಸೌಂದರ್ಯ ಪ್ರಶ್ನಾತೀತ. ಅಸಾಧಾರಣವಾದ ಲಾವಣ್ಯ, ದೇಹಸೌಷ್ಠವ, ಅವಯವವಿನ್ಯಾಸ ಒಂದೊಂದೂ ಕೂಡ ಸ್ತ್ರೀಮನೋಜ್ಞತ್ವಕ್ಕೆ ಪುರಕವಾದ ವಿಶೇಷಣಗಳೇ. ಸಾಲದಕ್ಕೆ 'ರುಚಿರಸ್ಮಿತೇನ' ಎಂಬ ವಿಶೇಷಣವೂ ಕೂಡ ಇದಕ್ಕೆ ಪುಷ್ಟಿ ಕೊಟ್ಟಹಾಗೇ. ಇಷ್ಟು ಪ್ರಶ್ನೆ; ಪರಿಹಾರವೂ ಅತಿ ವಿರಳ. ಮುಂದಿದೆ ಸಿದ್ಧಾಂತ.

ಶುಕರಂತಹ ವಿರಕ್ತರು ಅತಿವಿರಳ. ವೈರಾಗ್ಯಮೂರ್ತಿಗಳು; ದಿಗಂಬರ ಎಂಬ ವಿಶೇಷಣವು ವೈರಾಗ್ಯದ ಇನ್ನೊಂದು ಮುಖ. ಮೈಮೇಲಿನ ಬಟ್ಟೆಯ ಅರಿವೇ ಇಲ್ಲ. ಅದೇ ರೀತಿ ದೇಹದ ಬಗ್ಗೆ ಕಿಂಚಿತ್ತೂ ಮೋಹವಿಲ್ಲ. ಸುಂದರಕಾಯ ಶುಕರದ್ದು ಹೌದು. ಆದರೆ ಶುಕರಿಗೆ ಸ್ತ್ರೀ ಆಕರ್ಷಣೆ ಅಲ್ಲ. ಆದರೆ ಸ್ತ್ರೀಯರಿಗೆ ಶುಕಾಚಾರ್ಯರು ಆಕರ್ಷಣೆ. ಅದಕ್ಕೇನೇ 'ಸ್ತ್ರೀಣಾಂ ಮನೋಜ್ಞಂ' ಎಂದದ್ದು. ಮನೋನಿಯಾಮಕರಾದ ರುದ್ರದೇವರೇ ಶುಕಾಚಾರ್ಯರಾಗಿ ಬಂದದ್ದು. ದೇಹದ ವರ್ಣನೆ ಇಲ್ಲಿದೆ. ಇದು ವಿರಕ್ತಿಗೆ ಅಭಿವ್ಯಂಜಕ. ಇಂತಹ ಸ್ಫುರದ್ಗಾತ್ರದ

ಮೇಲೆಯೂ ಕಿಂಚಿತ್ ಮೋಹವಿಲ್ಲ; ಎಂದರೆ ಇದು ನಿಜವಾದ ವೈರಾಗ್ಯ. ಮೋಹಕ್ಕೆ ಕಾರಣವಿದ್ದಾಗ ಮೋಹ ಇಲ್ಲ. ಅಂದರೆ ಅದು ನಿಜವಾದ ತ್ಯಾಗ-ವಿರಾಗ. ಇಲ್ಲದಿದ್ದರೆ ಅಭಾವವೈರಾಗ್ಯವೂ ಆಗುವ ಸಂದರ್ಭವಿದೆ. ಉಪವಾಸ ಮಾಡಿದ್ದು ಹೌದು. ಯಾಕೆ ಉಪವಾಸ ಮಾಡಿದ್ದು ಎಂದರೆ ಆಹಾರ ಸಿಗದಿದ್ದಕ್ಕಾಗಿ. ಇದಕ್ಕೆ ಮಹತ್ವವಿಲ್ಲ. ತಟ್ಟೆತುಂಬ ಬಡಿಸಿದ್ದರೂ ಮುಟ್ಟಿಲ್ಲವೆಂದರೆ ಅದು ನಿಜವಾದ ತ್ಯಾಗ.

ಹನುಮಂತದೇವರ ವೈರಾಗ್ಯದ ಬಗ್ಗೆ ನಾರಾಯಣಪಂಡಿತರು ಆಡಿದ ಮಾತು ಇಲ್ಲಿ ಮನನೀಯ. 'ನನು ಸಾ ವಿರಕ್ತಿಃ' - ಹನುಮಂತದೇವರಂತಹ ಪ್ರೇಷ್ಠತಮರಾದವರು ಶ್ರೀರಾಮದೇವರಿಗೆ ಮತ್ತೊಬ್ಬರಿಲ್ಲ. ರಾಮದೇವರಲ್ಲಿ ಇಲ್ಲದೇ ಇದ್ದ ಸಂಪತ್ತೇ ಇಲ್ಲ! ಇದು ಖಾಲಿಯಾಗುವುದೂ ಇಲ್ಲ. ಹೀಗಿದ್ದರೂ ಹನುಮಂತ ತನಗಾಗಿ ರಾಮದೇವರು ಒತ್ತಾಯಿಸಿದರೂ ಏನನ್ನೂ ಅಪೇಕ್ಷೆ ಪಡಲಿಲ್ಲ. ಇದೇ ನಿಜವಾದ ವೈರಾಗ್ಯ. ಶುಕಾಚಾರ್ಯರು ಇಂತಹ ದೇಹಸೌಷ್ಠವ ಇದ್ದರೂ, ಸಮೃದ್ಧವಾದ ಭೋಗ-ಭಾಗ್ಯವಿದ್ದರೂ ಏನನ್ನೂ ನಿರೀಕ್ಷೆ ಮಾಡದೇ ಇದ್ದದ್ದು ಎಂತಹ ವೈರಾಗ್ಯ! 'ಸ್ತ್ರೀಣಾಂ ಮನೋಜ್ಞಂ' ಎಂಬುದು ಶುಕರ ವೈರಾಗ್ಯಕ್ಕೆ ಅತ್ಯಂತಪೂರಕವಾದ ವಿಶೇಷಣ. ಇದೇ ದೊಡ್ಡ ಭಾಗ್ಯ. ಇದೇ ಭಾಗವತಧರ್ಮ. ಇದೇ ಭಾಗವತಪ್ರವಚನಕ್ಕೆ ಮುಖ್ಯ ಅಧಿಕಾರ. ಅದಕ್ಕೆ ವ್ಯಾಸರು ಭಾಗವತವನ್ನು ಶುಕಾಚಾರ್ಯರಿಗೆ ಧಾರೆಯೆರದು ಭಾಗವತ-ಪ್ರವರ್ತಕರನ್ನಾಗಿ ಮಾಡಿದ್ದು.

ಇದೆಲ್ಲ 'ಓಂ'ಕಾರದ ಅರ್ಥ; ಓಂಕಾರದ ಮೂಲವಾದ 'ಅವ' ಎಂಬ ಕ್ರಿಯಾಪದದ ಅರ್ಥವಿಸ್ತಾರ. 'ಅವ'ಧಾತುವಿಗೆ 'ಕಾಂತಿ' ಎಂಬ ಅರ್ಥವಿದೆ. ದೇಹದ ಕಾಂತಿಯಿಂದ ಕಂಗೊಳಿಸುವ ಶುಕರಿಗೆ ಅನ್ವಯಿಸುವಂತೆ ಭಗವಂತ ಮಾಡಿದ್ದಾನೆ. 'ಅವ'ಧಾತುವಿಗೆ 'ದೀಪ್ತಿ' ಎಂಬ ಅರ್ಥವೂ ಇದೆ. 'ಅವ'ಧಾತುವಿಗೆ 'ತೃಪ್ತಿ' ಎಂಬ ಅರ್ಥವೂ ಇದೆ. ತೃಪ್ತಿ ಎಂದರೂ, ಅಲಂಬುದ್ಧಿ ಎಂದರೂ, ಏನೂ ಬೇಡ ಅಂದರೂ, ವೈರಾಗ್ಯ ಅಂದರೂ ಒಂದೇ ಅರ್ಥ.

ಅವ=ರಕ್ಷಣ, ಗತಿ, ಕಾಂತಿ, ಪ್ರೀತಿ, ತೃಪ್ತಿ, ಅವಗಮ, ಪ್ರವೇಶ, ಶ್ರವಣ, ಸ್ವಾಮಿ, ಅರ್ಥಯಾಚನ, ಕ್ರಿಯಾ, ಇಚ್ಛಾ, ದೀಪ್ತಿ, ಅವಾಪ್ತಿ, ಆಲಿಂಗನ, ಹಿಂಸಾ, ದಾನ, ಭಾಗವೃದ್ಧಿಷು.

* * * * *



# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೮

(ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು**
**ಭಂಡಾರಕೆರೆ ಮಠ**

ಹಿಂದಿನ ಸಂಚಿಕೆಗಳಲ್ಲಿ ನಾನಾ ಮುಖಗಳಿಂದ ಶ್ರೀಕೃಷ್ಣನಾಮಾರ್ಥಗಳ ಚಿಂತನೆ ನಡೆಸಿದ್ದೇವೆ.

ಈ ಸಂಚಿಕೆಯಲ್ಲಿ ಶ್ರೀಕೃಷ್ಣನಿಗೆ ನಾಮಕರಣ ಸಂಸ್ಕಾರವನ್ನು ಮಾಡಿದ ಯಾದವ ಪುರೋಹಿತರಾದ ಗರ್ಗಾಚಾರ್ಯರು ವ್ಯಾಖ್ಯಾನಿಸಿದ ಶ್ರೀಕೃಷ್ಣ ನಾಮಾರ್ಥಗಳನ್ನು ಚಿಂತಿಸೋಣ.

ಗರ್ಗರು ವ್ಯಾಖ್ಯಾನಿಸಿದ ಕೃಷ್ಣನಾಮಾರ್ಥಗಳ ಮೇಲೆ ಶ್ರೀಬ್ರಹ್ಮವೈವರ್ತ-ಪುರಾಣದ ಶ್ರೀಕೃಷ್ಣಜನ್ಮಖಂಡವು ಬೆಳಕನ್ನು ಚೆಲ್ಲಿದೆ -

೧) **ಕರ್ಮನಿರ್ಮೂಲವಚನಃ ಕೃಷಿರ್ನೋ ದಾಸ್ಯವಾಚಕಃ ।**
**ಅಕಾರೋ ದಾತೃವಚನಸ್ತೇನ ಕೃಷ್ಣ ಇತಿ ಸ್ಮೃತಃ ॥**

**ಕೃಷ್ಣ** ಶಬ್ದದಲ್ಲಿ **ಕೃಷಿ + ನ್ + ಅ = ಕೃಷ್ಣಃ** ಎಂಬುದಾಗಿ ವಿಂಗಡಿಸಿಕೊಂಡು ಅರ್ಥಾವಲೋಕನ ಮಾಡಬೇಕು. 'ಕೃಷಿ' ಶಬ್ದಾರ್ಥ ಪಾಪಕರ್ಮಗಳ ಕ್ಷಯ. 'ನ' ಶಬ್ದವು ಪರಿಶುದ್ಧದಾಸ್ಯ ಎಂಬರ್ಥವನ್ನು ಪ್ರತಿಪಾದಿಸುತ್ತದೆ. ಅಕಾರವು ಅವೆರಡನ್ನು ನೀಡುವ ದಾತೃವನ್ನು ಬೋಧಿಸುತ್ತದೆ. ಒಟ್ಟಿನಲ್ಲಿ ಭಕ್ತಜನರ ಸರ್ವಪಾಪಕರ್ಮಗಳನ್ನು ದೂರಮಾಡಿ ಮೋಕ್ಷದಲ್ಲಿ ಆನಂದರೂಪವಾದ ಪರಿಶುದ್ಧದಾಸ್ಯಭಾವ(ಭಕ್ತಿ)ವನ್ನು ನೀಡುವ ಶ್ರೀದೇವಕೀನಂದನನಿಗೆ ಶ್ರೀಕೃಷ್ಣ ಎಂಬ ನಾಮವು ಅನ್ವರ್ಥವೆನಿಸಿದೆ.

ಸಂಸಾರದೆಶೆಯಲ್ಲೂ ವಿಶೇಷವಾಗಿ ದೇವಕೀನಂದನನು ಅವತಾರ ಮಾಡಿದ ದೇವತೆಗಳಿಗೂ ದಾಸ್ಯಭಾವವನ್ನು ನೀಡಿ ಅನುಗ್ರಹಿಸಿದ್ದಾನೆ. 'ವಿಷ್ಣೋರನುಚರತ್ವಂ ಹಿ ಮೋಕ್ಷಮಾಹುರ್ಮನೀಷಣಃ' ಎಂಬ ಪುರಾಣೋಕ್ತಿಯು ಹಾಗೂ 'ವಿಷ್ಣೋರ್ದಾಸತಯಾ ಸಾಮೀಪ್ಯಂ ಮೋಕ್ಷ ಉಚ್ಯತೇ' ಎಂಬ ಮಧ್ವ ಉದಾಹೃತ ಪುರಾಣೋಕ್ತಿಯು ಪ್ರತಿಪಾದಿಸಿರುವಂತೆ ಭಗವಂತನ ದಾಸ್ಯವೇ ಮೋಕ್ಷ. ಸಂಸಾರದಲ್ಲಿ ನೀಚರ ದಾಸ್ಯ ಮಾತ್ರ ಬಂಧಕ-ದುಃಖಪ್ರದ. ಭಗವಂತನ ದಾಸ್ಯಭಾವ ಆನಂದರೂಪವೇ ಆಗಿದೆ. ''ಸೈವ ಆನಂದಸ್ವರೂಪಿಣೀ'' ಎಂಬ

ಮಧ್ವರ ವಾಣಿಯು ಇದನ್ನು ಸ್ಪಷ್ಟಪಡಿಸಿದೆ. ಆನಂದರೂಪವಾದ ದಾಸ್ಯವನ್ನು ಅನುಗ್ರಹಿಸುವ ಭಗವಾನ್ ದೇವಕೀನಂದನನು ತನ್ನನ್ನು ಶರಣು ಹೊಂದುವ ಭಕ್ತರ ಸರ್ವಪಾಪಕರ್ಮಗಳನ್ನೂ ದೂರ ಮಾಡುತ್ತಾನೆ.

'ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ' - ಅರ್ಜುನನಿಗೆ ನೀಡಿದ ಈ ಅಭಯವಚನದಿಂದ ಶ್ರೀಕೃಷ್ಣನಿಗೆ ಸರ್ವಪಾಪಕರ್ಮ-ಮೋಚಕತ್ವ ಸ್ಪಷ್ಟವಾಗುತ್ತದೆ.

೨) **ಕೃಷಿರ್ನಿಶ್ಚೇಷ್ಟವಚನೋ ನಕಾರೋ ಭಕ್ತಿವಾಚಕಃ ।**
**ಅಕಾರೋ ಪ್ರಾಪ್ತಿವಚನಸ್ತೇನ ಕೃಷ್ಣಃ ಪ್ರಕೀರ್ತಿತಃ ॥'**

'ಕೃಷಿ'ಶಬ್ದಾರ್ಥ ಬಂಧಕಕಾಮ್ಯಕರ್ಮದಿಂದ ದೂರವಾದದ್ದು; ನಕಾರಾರ್ಥ ನಿರ್ಮಲಭಕ್ತಿ; ಅಕಾರಾರ್ಥ ಪ್ರಾಪ್ತಿ; ಒಟ್ಟಿನಲ್ಲಿ ಬಂಧಕವಾದ ಕಾಮ್ಯಕರ್ಮದಿಂದ ದೂರವಾದ ತಾರಕನಿರ್ಮಲಭಕ್ತಿಪ್ರಾಪ್ತಿಗೆ ಕಾರಣೀಭೂತನಾದುದರಿಂದ ದೇವಕೀನಂದನನಿಗೆ ಶ್ರೀಕೃಷ್ಣ ನಾಮ ಸಾರ್ಥಕ.

ಭಗವಾನ್ ಶ್ರೀಕೃಷ್ಣನು ನಿಷ್ಕಾಮಕರ್ಮಯೋಗಸಂದೇಶದಿಂದ ಯೋಗ್ಯಜೀವರನ್ನು ಬಂಧಕವಾದ ಕಾಮ್ಯಕರ್ಮದ ಅನುಷ್ಠಾನದಿಂದ ದೂರ ಮಾಡುತ್ತಾನೆ. ತನ್ನ ಬಗೆಗಿನ ಭಕ್ತಿಭಾವವನ್ನು ನೀಡುತ್ತಾನೆ.

ಅವನು ಭಗವದ್ಗೀತೆಯ ವಚನದಿಂದ ಭಕ್ತಿಯನ್ನು ನೀಡುವವನು ತಾನೇ ಎಂಬುದಾಗಿ ಸ್ಪಷ್ಟಪಡಿಸಿದ್ದಾನೆ - **'ಸುಖಂ ದುಃಖಂ ಭವೋऽಭಾವೋ ಭಯಂ ಚಾಭಯಮೇವ ಚ । ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋऽಯಶಃ। ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ'** ಎಂಬ ಪದ್ಯದಲ್ಲಿ 'ಭವೋ ಭಾವಃ' ಎಂಬ ಸ್ಥಳದಲ್ಲಿ 'ಭವಃ' 'ಅಭಾವಃ' ಎಂಬುದಾಗಿ ಪದಗಳನ್ನು ವಿಂಗಡಿಸಿಕೊಳ್ಳುವಂತೆ 'ಭವಃ' 'ಭಾವಃ' ಎಂಬುದಾಗಿ ಪದಗಳನ್ನು ವಿಂಗಡಿಸಿಕೊಳ್ಳಬಹುದು.

ಇಲ್ಲಿ 'ಭಾವಃ' ಎಂಬುದಾಗಿ ಪದವನ್ನು ವಿಂಗಡಿಸಿದಾಗ ಈ ಶಬ್ದದಿಂದ ಭಕ್ತಿ ಎಂಬರ್ಥವು ಪ್ರತಿಪಾದಿತವಾಗುತ್ತದೆ. ಏಕೆಂದರೆ 'ಭಾವೋ ಭಕ್ತಿಃ ಸಮುದ್ದಿಷ್ಟಃ' ಎಂಬ ಪ್ರಮಾಣವಚನದಿಂದ ಭಾವ ಶಬ್ದವು ಭಕ್ತಿವಾಚಕವೆಂದು ಸಿದ್ಧವಾಗಿದೆ.

ಒಟ್ಟಿನಲ್ಲಿ ಶಮದಮಾದಿಸದ್ಗುಣಗಳಂತೆ ಭಕ್ತಿ ಎಂಬ ಸದ್ಗುಣವೂ ತನ್ನಿಂದ ಯೋಗ್ಯ ಜೀವರಿಗೆ ಉಂಟಾಗುತ್ತದೆ ಎಂಬುದು ಶ್ರೀಕೃಷ್ಣನ ಆಶಯವಾಗಿದೆ.



ಭಗವಾನ್ ಶ್ರೀಕೃಷ್ಣನು ಬ್ರಹ್ಮನ ಮಾತಿನಂತೆ ದ್ರೋಣ - ಧರಾ ಸ್ವರೂಪರಾದ ನಂದ - ಯಶೋದೆಯರಿಗೆ ಮಗನಾಗಿ ತನ್ನ ಸುಮಧುರ ಬಾಲಲೀಲೆಯಿಂದ ಅವರಿಗೆ ತನ್ನ ಬಗೆಗಿನ ವಿಶೇಷಭಕ್ತಿಯನ್ನು ಜಾಗೃತಗೊಳಿಸಿದ್ದಾನೆಂದು ಭಾಗವತವೇ ಸ್ಪಷ್ಟಪಡಿಸಿದೆ. ಇದಲ್ಲದೆ ದೇವತೆಗಳು ವಿಶೇಷಹರಿಭಕ್ತಿಲೋಭದಿಂದ ಗೋಪಿಕಾ-ಸ್ತ್ರೀಯರಲ್ಲಿ ೧೬೧೦೦ ರಾಜಕನ್ಯೆಯರಲ್ಲಿ (ಕೃಷ್ಣನಿಂದ ವಿವಾಹಿತರು) ಶ್ರೀಕೃಷ್ಣನಿಂದ ಪುತ್ರರಾಗಿ ಜನ್ಮತಳೆದರು ಎಂಬುದನ್ನು ಆಚಾರ್ಯಮಧ್ವರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸ್ಪಷ್ಟಪಡಿಸಿದ್ದಾರೆ :

**ಸರ್ವೇऽಪಿ ದೈವತಗಣಾ ಭಗವತ್ಸುತತ್ವ-**
**ಮಾಪ್ತುಂ ಧರಾತಲಗತಾ ಹರಿಭಕ್ತಿಹೇತೋಃ ।**

ಒಟ್ಟಿನಲ್ಲಿ ಭಗವಾನ್ ಶ್ರೀಕೃಷ್ಣನು ಬಹುದೇವತೆಗಳಿಗೆ ಗೋಪಿಕಾಸ್ತ್ರೀಯರಲ್ಲಿ - ರಾಜಕನ್ಯೆಯರಲ್ಲಿ ಜನ್ಮ ನೀಡಿ ಪುತ್ರರಾದ ಅವರಿಗೆ ತನ್ನ ಬಗೆಗಿನ ವಿಶೇಷ ಭಕ್ತಿ ಸಂಪತ್ತನ್ನು ನೀಡಿ ಅನುಗ್ರಹಿಸಿದ್ದಾನೆ. ಈ ಮೂಲಕ ತನ್ನ ನಾಮವನ್ನು ಸಾರ್ಥಕಪಡಿಸಿಕೊಂಡಿದ್ದಾನೆ.

ತನ್ನನ್ನು ಶಪಿಸಲು ಹೊರಟಿರುವ ಉದಂಕರಿಗೆ ಕರುಣೆ ತೋರಿ ವಿಶ್ವರೂಪವನ್ನು ತೋರಿ ಅವರ ಕೋಪವನ್ನು ಶಾಂತಿಗೊಳಿಸಿ ತನ್ನ ಬಗೆಗೆ ವಿಶೇಷ ಭಕ್ತಿ ಜಾಗ್ರತವಾಗುವಂತೆ ಮಾಡಿದ್ದಾನೆ.

ಹೆಚ್ಚೇಕೆ? ದೇವಕಿನಂದನನು ತನ್ನ ಅವತಾರಕಾಲದಲ್ಲಿ ವಿಶೇಷವಾಗಿ ಅಮಾನುಷ ದಿವ್ಯಲೀಲೆಗಳಿಂದ ಸರ್ವಯೋಗ್ಯಜೀವರಲ್ಲೂ ಭಕ್ತಿ ಜಾಗೃತಗೊಳಿಸಿದ್ದಾನೆ.

ಒಟ್ಟಿನಲ್ಲಿ ಉದ್ಧವಗೀತೆ-ಭಗವದ್ಗೀತೆ ಮುಂತಾದ ಕಡೆಗಳಲ್ಲಿ ಪರಿಣಾಮ-ಕಾರಿಯಾದ ನಿಷ್ಕಾಮಕರ್ಮಯೋಗ ಸಂದೇಶದಿಂದ ಕಾಮ್ಯಕರ್ಮವನ್ನು ನಮ್ಮಿಂದ ಬಿಡಿಸಿ, ಅಮಾನುಷಲೀಲೆ - ವಿಶ್ವರೂಪದರ್ಶನದಿಂದ, ಪುತ್ರತ್ವೇನ ದೇವತಾಸ್ವೀಕಾರ ಮುಂತಾದವುಗಳಿಂದ ವಿವಿಧಯೋಗ್ಯಜೀವರಿಗೆ ತಾರಕಭಕ್ತಿಯನ್ನು ನೀಡಿ ಕೃಷ್ಣ ಶಬ್ದವು ತನ್ನಲ್ಲಿ ಸಾರ್ಥಕವೆಂದು ಸ್ಪಷ್ಟಪಡಿಸಿದ್ದಾನೆ.

೩) **ಕೃಷಿರ್ನಿರ್ವಾಣವಚನೋ ನಕಾರೋ ಮೋಕ್ಷವಾಚಕಃ ।**
**ಅಕಾರೋ ದಾತೃವಚನಸ್ತೇನ ಕೃಷ್ಣ ಇತಿ ಸ್ಮೃತಃ ॥**

ಕೃಷಿಶಬ್ದಾರ್ಥ ಪ್ರಾಕೃತದೇಹಬಂಧನರಹಿತ; ನಕಾರಾರ್ಥ ಮೋಕ್ಷ; ಅಕಾರಾರ್ಥ ನೀಡುವವನು.

ಏವಂಚ ಪ್ರಾಕೃತದೇಹಬಂಧನವಿಲ್ಲದ ಮೋಕ್ಷವನ್ನು ನೀಡುವವನಾದುದರಿಂದ ಭಗವಾನ್ ದೇವಕೀನಂದನಿಗೆ ಕೃಷ್ಣ ಎಂಬ ಹೆಸರು ಸಾರ್ಥಕ.

ತನ್ನ ಸುಮಧುರಕಥೆಯನ್ನು ಆಲಿಸಿದ ಭಾಗವತನಾದ ಪರೀಕ್ಷಿದ್ರಾಜನಿಗೆ ಪ್ರಾಕೃತ ದೇಹಬಂಧನವಿಲ್ಲದ ಮೋಕ್ಷವನ್ನು ಭಗವಾನ್ ದೇವಕೀನಂದನು ನೀಡಿದ್ದಾನೆ ಎಂಬುದು '**ಭೇಜೇ ಖಗೇಂದ್ರಧ್ವಜಪಾದಮೂಲಮ್**' ಎಂಬ ಭಾಗವತ ಮಾತಿನಿಂದ ಸ್ಪಷ್ಟವಾಗುತ್ತದೆ ತಾನೇ?

ವಿಪ್ರಪತ್ನಿಯು ಗಂಡನ ನಿರ್ಬಂಧದಿಂದ ಶ್ರೀಕೃಷ್ಣದರ್ಶನ ಪಡೆದು ಆತನಿಗೆ ಷಡ್ರಸಭರಿತ ಅನ್ನವನ್ನು ಅರ್ಪಿಸಲು ವಿಫಲಳಾದಳು. ಈ ಹಂತದಲ್ಲಿ ಕೃಷ್ಣನ ವಿರಹದಿಂದ ಸಂತಪ್ತಳಾದ ಆಕೆ ಶ್ರೀಕೃಷ್ಣನನ್ನೇ ಹೃದಯದಲ್ಲಿ ಆಲಿಂಗಿಸಿ (ಧ್ಯಾನಿಸಿ) ದೇಹಬಂಧನವಿಲ್ಲದ ಭಗವಂತನ ಚರಣಪ್ರಾಪ್ತಿರೂಪವಾದ ಮೋಕ್ಷವನ್ನು ಪಡೆದಳು ಎಂಬುದಾಗಿ ಭಾಗವತವು ಪ್ರತಿಪಾದಿಸಿದೆ.

ಇದಲ್ಲದೆ ಗೋಪಿಕಾಸ್ತ್ರೀಯರೂ ಕೂಡ ಶ್ರೀಕೃಷ್ಣನ ಸಂಗದಿಂದ ಕ್ರಮೇಣ ಸ್ವರ್ಗದಲ್ಲಿ ವಿಕಾಸವನ್ನು ಹೊಂದಿದ ಜ್ಞಾನವನ್ನು ಪಡೆದು ಕೃಷ್ಣನ ಅನುಗ್ರಹದಿಂದ ದೇಹಬಂಧನವಿಲ್ಲದ ಮುಕ್ತಿಯನ್ನು ಪಡೆದರೆಂದು ಅದು ಪ್ರತಿಪಾದಿಸಿದೆ.

ಒಟ್ಟಿನಲ್ಲಿ ಪರೀಕ್ಷಿತ್ - ವಿಪ್ರಪತ್ನಿ - ಗೋಪಿಕಾಸ್ತ್ರೀಯರು ಮುಂತಾದ ಭಾಗವತರಿಗೆ ದೇಹಬಂಧನವಿಲ್ಲದ ಮುಕ್ತಿಯನ್ನು ಕರುಣಿಸಿದ ಶ್ರೀ ದೇವಕೀನಂದನನು ಶ್ರೀಕೃಷ್ಣ ಎಂಬ ನಾಮವು ತನ್ನಲ್ಲಿ ಸಾರ್ಥಕವೆಂದು ಸಾಬೀತುಪಡಿಸಿದ್ದಾನೆ.

ಅತೀತಪ್ರಬಂಧೇಷು ಶ್ರೀಕೃಷ್ಣನಾಮಾರ್ಥವಿಮರ್ಶಃ ಬಹುಧಾ ವಿಹಿತಃ । ಅಸ್ಮಿನ್ ಪ್ರಬಂಧೇ ಶ್ರೀಕೃಷ್ಣಸ್ಯ ನಾಮಸಂಸ್ಕಾರಂ ಕೃತವತಾ ಗರ್ಗಾಚಾರ್ಯೇಣ ವ್ಯಾಖ್ಯಾತೋ ನಾಮಾರ್ಥಃ ನಿರೂಪ್ಯತೇ । ತದ್ವ್ಯಾಖ್ಯಾತಃ ಕೃಷ್ಣನಾಮಾರ್ಥಃ ಬ್ರಹ್ಮವೈವರ್ತಪುರಾಣಸ್ಥಶ್ರೀಕೃಷ್ಣಜನ್ಮಖಂಡೇ ಪ್ರತಿಪಾದಿತಃ ॥

೧) **ಕರ್ಮನಿರ್ಮೂಲವಚನಃ ಕೃಷಿರ್ನೋ ದಾಸ್ಯವಾಚಕಃ ।**
**ಅಕಾರೋ ದಾತೃವಚನಸ್ತೇನ ಕೃಷ್ಣ ಇತಿ ಸ್ಮೃತಃ ॥**

ಕೃಷ್ಣಶಬ್ದೇ **ಕೃಷಿ+ನ್+ಅಃ** ಇತಿ ಅವಯವವಿಭಾಗಂ ಸ್ವೀಕೃತ್ಯ ಅರ್ಥಚಿಂತನಂ ಕರ್ತವ್ಯಮ್ । ಕೃಷಿಶಬ್ದಾರ್ಥಃ ಪಾಪಕರ್ಮಣಾಂ ಕ್ಷಯಃ । ನಕಾರಃ ಹರಿದಾಸ್ಯವಾಚಕಃ । ಅಕಾರಸ್ತದುಭಯದಾತೃವಚನಃ ॥



ಏವಂ ಚ ಭಕ್ತಜನಕೃತಸರ್ವಪಾಪಕರ್ಮಾಣಿ ದೂರೀಕೃತ್ಯ ಮೋಕ್ಷೇ ಆನಂದಾತ್ಮಕದಾಸ್ಯಸ್ಯ ದಾನಾತ್ ದೇವಕೀನಂದನಸ್ಯ ಶ್ರೀಕೃಷ್ಣ ಇತಿ ನಾಮ ಸಾರ್ಥಕಮಿತಿ ವೇದಿತವ್ಯಮ್ । ಸಂಸಾರದಶಾಯಾಮಪಿ ಭಗವಾನ್ ದೇವಕೀನಂದನಃ ಅವತೀರ್ಣಾನಾಂ ದೇವಾನಾಂ ವಿಶೇಷತಃ ಸ್ವದಾಸ್ಯಂ ಪ್ರದಾಯ ಅನುಜಗ್ರಾಹ ॥

'ವಿಷ್ಣೋರನುಚರತ್ವಂ ಹಿ ಮೋಕ್ಷಮಾಹುರ್ಮನೀಷಿಣಃ' ಇತಿ ಪುರಾಣೋಕ್ತಿಃ। ತಥಾ 'ವಿಷ್ಣೋರ್ದಾಸತಯಾ ಸಾಮೀಪ್ಯಂ ಮೋಕ್ಷ ಉಚ್ಯತೇ' ಇತಿ ಮಧ್ವೋದಾಹೃತಪ್ರಮಾಣೋಕ್ತಿಶ್ಚ ಭಗವದ್ದಾಸ್ಯಮೇವ ಮೋಕ್ಷ ಇತಿ ಪ್ರತ್ಯಪೀಪದತಾಮ್ । ಸಂಸಾರದಶಾಯಾಂ ನೀಚದಾಸ್ಯಮೇವ ಬಂಧಕಂ ದುಃಖದಂ ಚ, ಕಿಂತು ಮೋಕ್ಷೇ ಅನಂತಕಲ್ಯಾಣಗುಣಾಭಿರಾಮಹರಿದಾಸ್ಯಂ ತು ಆನಂದಾತ್ಮಕಮೇವೇತಿ ವೇದಿತವ್ಯಮ್ ॥

ಸಂಸಾರದಶಾಯಾಂ ಸಾಧನಾತ್ಮಕಂ ಭಕ್ತ್ಯುಪಾಸನಾದಿಕಂ ಮೋಕ್ಷೇ ಫಲಾತ್ಮಕಮೇವೇತಿ 'ಸೈವ ಆನಂದಸ್ವರೂಪಿಣೀ' ಇತ್ಯಾದಿವಚನೇನ ಮಧ್ವೇನ ಸ್ಫುಟೀಕೃತಮ್ ॥

ಏವಂ ಚ 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥' ಇತ್ಯುಕ್ತದಿಶಾ ಸ್ವಂ ಶರಣಂಗತಾನಾಂ ಭಕ್ತಾನಾಂ ಸರ್ವಪಾಪಕರ್ಮಾಣಿ ದೂರೀಕೃತ್ಯ ಆನಂದಾತ್ಮಕಂ ಸ್ವದಾಸ್ಯಂ ವಿತನ್ವನ್ ದೇವಕೀನಂದನಃ ಶ್ರೀಕೃಷ್ಣ ಇತಿ ನಾಮ ಸ್ವಾತ್ಮನಿ ಸಾರ್ಥಕಮಿತಿ ಸ್ಫುಟೀಚಕಾರ ॥

೨) **ಕೃಷಿರ್ನಿಶ್ಶ್ರೇಷ್ಟವಚನೋ ನಕಾರೋ ಭಕ್ತಿವಾಚಕಃ ।**
**ಅಕಾರೋ ಪ್ರಾಪ್ತಿವಚನಸ್ತೇನ ಕೃಷ್ಣಃ ಪ್ರಕೀರ್ತಿತಃ ॥'**

ಕೃಷಿಶಬ್ದಾರ್ಥಃ ಬಂಧಕಕಾಮ್ಯಕರ್ಮವರ್ಜಿತಾ ಇತಿ । ನಕಾರಾರ್ಥಃ ನಿರ್ಮಲಾ ಭಕ್ತಿಃ । ಅಕಾರಸ್ತು ಪ್ರಾಪ್ತಿವಾಚಕಃ । ಏವಂ ಚ ಬಂಧಕಕಾಮ್ಯಕರ್ಮವರ್ಜಿತ-ತಾರಕನಿರ್ಮಲಭಕ್ತಿಕಾರಣೀಭೂತಸ್ಯ ವಾಸುದೇವಸ್ಯ ಶ್ರೀಕೃಷ್ಣೇತಿ ನಾಮ ಅನ್ವರ್ಥಮಿತಿ ಸಿದ್ಧಮ್ । ಭಗವಾನ್ ಯಾದವೇಂದ್ರೋ ಭಗವದ್ಗೀತಾಯಾಂ ಉದ್ಧವಗೀತಾಯಾಂ ಚ ನಿಷ್ಕಾಮಕರ್ಮಯೋಗಸಂದೇಶೇನ ಯೋಗ್ಯಜೀವಾನ್ ಬಂಧಕಕಾಮ್ಯಕರ್ಮಾನುಷ್ಠಾನತಃ ವಿಮೋಚ್ಯ ಸ್ವವಿಷಯಭಕ್ತಿಭಾವಂ ಚ ವಿತರತಿ । ತಥಾ ಚೋಕ್ತಮ್ -

**ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ ।**
**ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಾಃ ।**
**ಭವಂತಿ ಭಾವಾ ಭೂತಾನಾಮತ ಏವ ಏವ ಪೃಥಗ್ವಿಧಾಃ ॥**

ಇತ್ಯತ್ರ 'ಭವಃ ಅಭಾವಃ' ಇತಿ ಪದಚ್ಛೇದೋ ಯಥಾಽಭಿಮತಃ ತಥಾ 'ಭವಃ ಭಾವಃ' ಇತಿ ಪದಚ್ಛೇದೋಽಪಿ ಅಭಿಮತ ಏವ । ತತ್ರ 'ಭಾವ'ಶಬ್ದಾರ್ಥಃ ಭಕ್ತಿರಿತಿ 'ಭಾವೋ ಭಕ್ತಿಃ ಸಮುದ್ದಿಷ್ಟಃ' ಇತಿ ಪ್ರಮಾಣವಚನೇನ ಸಿದ್ಧಮ್ । ಏವಂ ಚ ನಿರ್ದಿಷ್ಟಗೀತಾವಚನೇನ ಶಮದಮಾದಿಸದ್ಗುಣವತ್ ಭಕ್ತಿರೂಪಸದ್ಗುಣೋಽಪಿ ಸ್ವಾನುಗ್ರಹತ ಏವ ಯೋಗ್ಯಜೀವಾನಾಂ ಭವತೀತಿ ಶ್ರೀಕೃಷ್ಣೇನ ಸ್ಫುಟೀಕೃತಮ್ ॥

ತಥಾಹಿ - ಭಗವಾನ್ ವಾಸುದೇವಃ ಬ್ರಹ್ಮವಚನಾನುರೋಧೇನ ದ್ರೋಣ-ಧರಾಸ್ವರೂಪಯೋಃ ನಂದಯಶೋದಯೋಃ ಸುಪುತ್ರಃ ಸನ್ ಹೃದಯಂಗಮಬಾಲಲೀಲಾಪ್ರದರ್ಶನೇನ ಸ್ವವಿಷಯಕಭಕ್ತಿಭಾವಂ ವರ್ಧಯಾ-ಮಾಸ । ಬಹುದೈವತಗಣಾನಾಂ ಚ ಹರಿಭಕ್ತ್ಯತಿಶಯಲಾಭಲೋಭೇನ ಭಗವತ್ಸುತತ್ತ್ವಲಿಪ್ಸೂನಾಂ ಗೋಪಿಕಾಸು ಶತೋತ್ತರಷೋಡಶಸಹಸ್ರಸಂಖ್ಯಾಕಾಸು ರಾಜಕನ್ಯಾಸು ಚ ಜನ್ಮ ಪ್ರದಾಯ ಸ್ವವಿಷಯಭಕ್ತ್ಯತಿಶಯಂ ವ್ಯತರತ್ ॥

ಹರಿಭಕ್ತ್ಯತಿಶಯಲಾಭಲೋಭೇನ ದೈವತಾಗಣಾಃ, ಭಗವತ್ಸುತತ್ತ್ವಮಾಪ್ತುಂ ಧರಾತಲಂ ಗತಾ ಇತಿ ''ಸರ್ವೇಽಪಿ ದೈವತಗಣಾ ಭಗವತ್ಸುತತ್ತ್ವಮಾಪ್ತುಂ ಧರಾತಲಗತಾಃ ಹರಿಭಕ್ತಿಹೇತೋಃ'' ಇತಿ ವಚನೇನ ಸಿದ್ಧಮ್ ॥

ಸ್ವಾತ್ಮಾನಂ ಶಪ್ತುಮುದ್ಯತಸ್ಯ ಉದಂಕಸ್ಯಾಪಿ ಕರುಣಯಾ ವಿಶ್ವರೂಪಂ ಪ್ರದರ್ಶ್ಯ ತಸ್ಯ ಕೋಪೋಪಶಮಂ ವಿಧಾಯ ಸ್ವವಿಷಯಕಭಕ್ತ್ಯತಿಶಯಂ ಪ್ರದದೌ॥

ಕಿಂ ಬಹುನೋಕ್ತೇನ - ''ಯಾನಿ ತೇ ಚರಿತಾನೀಹ ಮನುಷ್ಯಾಃ ಸಾಧವಃ ಕಲೌ ಶೃಣ್ವಂತಃ ಕೀರ್ತಯಂತಶ್ಚ ತರಿಷ್ಯಂತ್ಯಂಜಸಾ ತಮಃ ॥''

ಇತಿ ಭಾಗವತಬ್ರಹ್ಮವಚನೋಕ್ತದಿಶಾ ಶ್ರದ್ಧಯಾ ಸ್ವಚರಿತಾಮೃತಪಾನ-ಕೀರ್ತನಾದಿಕಂ ಕುರ್ವತಾಂ ಸರ್ವಸಾಧೂನಾಮಪಿ ಭಗವಾನ್ ದೇವಕೀನಂದನಃ ಭಕ್ತ್ಯತಿಶಯಂ ವಿತೀರ್ಯ ಮೋಕ್ಷಂ ಪ್ರದದಾತೀತಿ ಸಿದ್ಧಮ್ ॥

ಏವಂ ಚ ಭಗವದ್ಗೀತೋದ್ಧವಗೀತಾದಿಷು ನಿಷ್ಕಾಮಕರ್ಮಯೋಗಸಂದೇಶೇನ ಕಾಮ್ಯಕರ್ಮಾನುಷ್ಠಾನತಃ ಅಸ್ಮಾನ್ ವಿಮೋಚ್ಯ ಅಮಾನುಷಲೀಲಾಪ್ರದರ್ಶನ-ವಿಶ್ವರೂಪಪ್ರದರ್ಶನದೇವತಾಸುತತ್ತ್ವಪರಿಗ್ರಹಾದಿನಾ ವಿವಿಧಯೋಗ್ಯಜೀವಾನಾಂ



ಸ್ವಾತ್ಮನಿ ತಾರಕಭಕ್ತಿಂ ವಿತನ್ವತೋ ದೇವಕೀನಂದನಸ್ಯ ಕೃಷ್ಣೇತಿ ನಾಮ ಸಾರ್ಥಕಮಿತಿ ಸಿದ್ಧಮ್ ॥

೩) **ಕೃಷಿರ್ನಿರ್ವಾಣವಚನೋ ನಕಾರೋ ಮೋಕ್ಷವಾಚಕಃ ।**
**ಅಕಾರೋ ದಾತೃವಚನಸ್ತೇನ ಕೃಷ್ಣ ಇತಿ ಸ್ಮೃತಃ ॥**

ಕೃಷಿಶಬ್ದಾರ್ಥಃ ಪ್ರಾಕೃತದೇಹಬಂಧವರ್ಜಿತ ಇತಿ । ನಕಾರಾರ್ಥಃ ಮೋಕ್ಷ ಇತಿ। ಅಕಾರಾರ್ಥಃ ದಾತಾ ಇತಿ ॥

ಏವಂ ಚ ಪ್ರಾಕೃತದೇಹಬಂಧವರ್ಜಿತಮೋಕ್ಷಸ್ಯ ಪ್ರದಾನಾತ್ ಭಗವತೋ ವಾಸುದೇವಸ್ಯ ಶ್ರೀಕೃಷ್ಣ ಇತಿ ನಾಮ ಅನ್ವರ್ಥಮಿತಿ ವೇದಿತವ್ಯಮ್ । ತಥಾಹಿ -

ಶ್ರೀಯಾದವೇಂದ್ರಃ ಸ್ವಮನೋಜ್ಞಕಥಾಮೃತಮಾಸ್ವಾದಿತವತಃ ಪರೀಕ್ಷಿತಃ ''ಭೇಜೇ ಖಗೇಂದ್ರಧ್ವಜಪಾದಮೂಲಮ್'' ಇತ್ಯುಕ್ತದಿಶಾ ನಿರ್ವಾಣಮೋಕ್ಷಂ ಪ್ರದದೌ । ವಿಪ್ರಪತ್ನೀ ಭರ್ತುಃ ನಿರ್ಬಂಧೇನ ಭಗವಂತಂ ಕೃಷ್ಣಂ ದೃಷ್ಟ್ವಾ ಷಡ್ರಸಾನ್ನಸ್ಯ ಸಮರ್ಪಣೇ ಅಕ್ಷಮಾ ಸತೀ ಭಗವದ್ವಿರಹಾಗ್ನಿನಾ ಸಂತಪ್ತಾ ಭಗವಂತಂ ಕೃಷ್ಣಮೇವ ಪ್ರದಧ್ಯೌ । ತದಾ ತಸ್ಯಾಃ ದೇಹಬಂಧಶೂನ್ಯಸ್ವಚರಣ-ಪ್ರಾಪ್ತಿರೂಪಮೋಕ್ಷಂ ವಿತತಾರ ಇತಿ । ''ಏಕಾ ಪತಿಪ್ರವಿಧೃತಾ ಪದಮಾಪ ವಿಷ್ಣೋಃ'', ''ತತ್ರೈಕಾ ವಿಧೃತಾ ಭರ್ತ್ರಾ ಭಗವಂತಂ ಯಥಾಶ್ರುತಮ್ । ಹೃದೋಪಗುಹ್ಯ ವಿಜಹೌ ದೇಹಂ ಕರ್ಮಾನುಬಂಧನಮ್॥'' ಇತ್ಯಾದಿಪ್ರಮಾಣ-ವಚನೇನ ಸಿದ್ಧಮ್ ॥

ತಮೇವ ಪರಮಾತ್ಮಾನಂ ಜಾರಬುದ್ಧ್ಯಾಽಪಿ ಸಂಗತಾಃ ''ಜಹುರ್ಗುಣಮಯಂ ದೇಹಂ ಸದ್ಯಃ ಪ್ರಕ್ಷೀಣಬಂಧನಾಃ'' ಇತ್ಯಾದ್ಯುಕ್ತದಿಶಾ ಸ್ವಸಂಗವತೀನಾಂ ಗೋಪಿಕಾನಾಮಪಿ ಸ್ವರ್ಗೇ ಕ್ರಮೇಣ ಪರಿಪಕ್ವಜ್ಞಾನಸಂಪತ್ತಿಂ ಪ್ರದಾಯ ನಿರ್ವಾಣಮೋಕ್ಷಂ ಪ್ರದದೌ ಇತಿ ಚ ಭಾಗವತೇ ಸ್ಫುಟಮ್ ॥

ತಥಾ ಚೋದಾಹೃತಪ್ರಮಾಣನಿಚಯೋಕ್ತದಿಶಾ ಪರೀಕ್ಷಿದಾದಿಭಾಗವತಾನಾಂ ನಿರ್ವಾಣಮೋಕ್ಷಪ್ರದಾನೇನ ಭಗವಾನ್ ದೇವಕೀನಂದನಃ ಸ್ವಾತ್ಮನಿ ಕೃಷ್ಣನಾಮ ಸಾರ್ಥಕಂ ವ್ಯದಧತ್ ॥

*****

# ಭಗವತ್ಪ್ರಿಯ

## (ಅನುಗ್ರಹ ಲೇಖನ)

**ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

**ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ।**
**ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ ॥**

ಶ್ರೀಮದ್ಭಗವದ್ಗೀತೆಯಲ್ಲಿ ಭಗವಂತ ತನಗೆ ಪ್ರಿಯರಾದ ವ್ಯಕ್ತಿಗಳನ್ನು ಪಟ್ಟಿ ಮಾಡಿ ಹೇಳುತ್ತಾ ಅಂದ ಮಾತಿದು. ಯಾರ ಮಾತು-ಕೃತಿಗಳಿಂದ ಲೋಕ ಉದ್ವೇಗಕ್ಕೆ ಒಳಗಾಗುವುದಿಲ್ಲವೋ, ಲೋಕದ ನಡತೆಯಿಂದ ಯಾವಾತ ತಾನೂ ಉದ್ವೇಗಕ್ಕೆ ಒಳಗಾಗುವುದಿಲ್ಲವೋ ಅಂತಹ ವ್ಯಕ್ತಿ ನನಗೆ ಪ್ರಿಯ.

ಈ ಮಾತಿನ ಮೂಲಕ ಶ್ರೀಕೃಷ್ಣ ಸಮಾಜದ ಬಗ್ಗೆ ತನಗಿರುವ ಕಾಳಜಿ ಏನೆಂಬುದನ್ನು ತೋರಿಕೊಟ್ಟಿದ್ದಾನೆ. ಆಸ್ತಿಕರೆನಿಸಿಕೊಂಡವರೆಲ್ಲರೂ ತಾವು ಭಗವಂತನಿಗೆ ಪ್ರಿಯರಾಗಿರಬೇಕೆಂದು ಬಯಸುತ್ತಾರೆ. ಅಂತಹ ಎಲ್ಲರಿಗೂ ಭಗವಂತನೊಡ್ಡಿದ ನಿಬಂಧನೆ ಇದು : ''ನೀನೂ ಎಂದೂ ಉದ್ವಿಗ್ನನಾಗಬೇಡ, ಎಂದೂ ಮತ್ತೊಬ್ಬರನ್ನು ಉದ್ವಿಗ್ನರನ್ನಾಗಿ ಮಾಡಬೇಡ''.

ವ್ಯಕ್ತಿ ಬಲಿಷ್ಠನಾಗಿದ್ದರೆ ಉದ್ವಿಗ್ನ ಸ್ಥಿತಿಯಲ್ಲಿ ಸಮಾಜಕ್ಕೆ ಕೇಡನ್ನು ಬಗೆಯುತ್ತಾನೆ. ದುರ್ಬಲನಾಗಿದ್ದರೆ ತನಗೆ ತಾನೇ ಅನರ್ಥವನ್ನು ತಂದೊಡ್ಡಿಕೊಳ್ಳುತ್ತಾನೆ.

ಶ್ರೀಕೃಷ್ಣನ ಆಶಯವಿದು : ''ನೀನೂ ಹಾಳಾಗಬೇಡ, ಸಮಾಜವನ್ನೂ ಹಾಳುಗೆಡವಬೇಡ; ನೀನೂ ಸುಖಿಯಾಗಿರು, ಸಮಾಜವೂ ನೆಮ್ಮದಿ-ಯಿಂದಿರಲಿ''. ಅದಕ್ಕಾಗಿ ನಿತ್ಯವೂ **''ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್''**. ''ಮಾತಿನಿಂದ ಮನೆ ಹಾಳು'' ಅಂತಾರೆ. ಅಂತಹ ಮಾತನ್ನಾಡದೆ ಮನಸ್ಸು ಮನಸ್ಸುಗಳನ್ನು ಬೆಸೆಯುವಂತಹ ಮಾತನ್ನಾಡು. ನನಗೆ ಪ್ರಿಯನಾಗುತ್ತಿ.

* * * * *



**ಸಂಪಾದಕೀಯ –**

# ಅಗತ್ಯಕ್ಕೆ ಸ್ಪಂದಿಸದ ಅಧ್ಯಯನ ಪದ್ಧತಿ

ಮಧ್ವಸಿದ್ಧಾಂತ ಇಹದ ಬದುಕನ್ನು ಬೆಳಗುವ, ಪಾರತ್ರಿಕ ಸುಖ ಶಾಂತಿಗಳಿಗೆ ದಾರಿ ತೋರುವ ಏಕೈಕ ಸಿದ್ಧಾಂತ. ಎಂದರೆ ಬದುಕಬಯಸುವ ಪ್ರತಿಯೊಬ್ಬರಿಗೂ ಅತ್ಯಗತ್ಯವಾದ ಸಿದ್ಧಾಂತ. ಮನುಕುಲಕ್ಕೆ ದಾರಿದೀಪವಾದ ಅಮೋಘ ಸಿದ್ಧಾಂತ. ಆದ್ದರಿಂದ ಇದು ಆತ್ಮೋದ್ಧಾರ, ಲೋಕೋದ್ಧಾರ ಬಯಸುವ ಸಕಲರನ್ನೂ ತಲುಪಬೇಕಾದ ಸಿದ್ಧಾಂತ.

ಆದರೆ ಇಂದು ಮಧ್ವಸಿದ್ಧಾಂತದ ಅಧ್ಯಯನ ಎಂದರೆ ಪಾಂಡಿತ್ಯ ಬಯಸುವ ಕೆಲವರಿಗಷ್ಟೇ ಅಗತ್ಯ ಎಂಬಂತಾಗಿದೆ. ಕೆಲವರದಂತೂ ಲೌಕಿಕ ವೃತ್ತಿಯಲ್ಲಿದ್ದವರು ಈ ಸಿದ್ಧಾಂತದ ಅಧ್ಯಯನ ಮಾಡಬಾರದು ಎಂಬ ವಿಚಿತ್ರ ನಿಲುವು. ಎಂದಿದ್ದರೂ ಇದು ಪರಲೋಕದ ಸಾಧನೆಗಷ್ಟೇ ಮೀಸಲು ಎಂಬ ಭ್ರಮೆ ಮತ್ತೆ ಕೆಲವರದು. ಮಹಿಳೆಯರು, ಬ್ರಾಹ್ಮಣೇತರರು ಇದನ್ನು ತಿಳಿಯಲು ಸರ್ವಥಾ ಅನರ್ಹರು ಎಂಬುದು ಇನ್ನು ಕೆಲವರ ಭಾವನೆ. ಎಂದರೆ ಸಮಸ್ತಯೋಗ್ಯರಿಗೂ ತಲುಪಬೇಕಾದ ಇದನ್ನು ಕೆಲವರಷ್ಟೇ ಅದೂ ಕೇವಲ ಪಾಂಡಿತ್ಯಸಂಪಾದನೆಗೆ ಮಾತ್ರವೇ ಅಧ್ಯಯನ ಮಾಡಬೇಕೆಂಬುದೇ ಹೆಚ್ಚಿನವರ ನಿಲುವು. ಇದು ಅನ್ನ ನೀರುಗಳನ್ನು ಒಂದು ಕೋಮಿಗಷ್ಟೇ ಸೀಮಿತಗೊಳಿಸುವ ಅವ್ಯಾವಹಾರಿಕ ಧೋರಣೆ ಎನ್ನದೆ ವಿಧಿಯಿಲ್ಲ.

ಮಧ್ವಸಿದ್ಧಾಂತದ ಅಧ್ಯಯನಕ್ಕೆ ಸಂಸ್ಕೃತ ಭಾಷೆಯ ಜ್ಞಾನ ಮೂಲಭೂತ ಅಗತ್ಯ ಎಂಬುದು ಕೆಲವರ ವಾದ; ಅದು ಒಂದರ್ಥದಲ್ಲಿ ಸತ್ಯವೂ ಹೌದು. ಆದರೆ ಸಿದ್ಧಾಂತದ ಪ್ರಮೇಯಗಳ ಪರಿಜ್ಞಾನಕ್ಕೆ ಭಾಷೆ ಪ್ರಧಾನವಾದ ಅಡ್ಡಿಯೇನೂ ಆಗಬೇಕಿಲ್ಲ ಎಂಬುದನ್ನು ಹರಿದಾಸರು ನಿರೂಪಿಸಿರುವರು. ಹರಿದಾಸಸಾಹಿತ್ಯವು ಓದುಬರಹ ಬಾರದ ಜನರನ್ನೂ ಸಹ ತಲುಪಿದ ಸಾಹಿತ್ಯ ಎಂಬುದು ಸೂರ್ಯಪ್ರಕಾಶದಷ್ಟು ಸತ್ಯ. ಹರಿದಾಸರ ಸಾಧನೆ ಈ ದೃಷ್ಟಿಯಲ್ಲಿ ಅನುಪಮವಾದ್ದು. ಅನಂತರದ ಅನುವಾದ ಪ್ರಾಕಾರದ ಪರಿಕಲ್ಪನೆಯೂ ಇದಕ್ಕೆ ಪೂರಕವಾದ ದೃಷ್ಟಿಕೋನವನ್ನೇ ಹೊಂದಿದೆ. ಎಂದರೆ ಭಾವಗ್ರಹಣ ಮಾಡುವ ಪರಿಪಾಕ ಇದ್ದವರಿಗೆ ಸಿದ್ಧಾಂತದ ಪರಿಜ್ಞಾನ ಒಂದು ಹಂತದವರೆಗೆ ಸಾಧ್ಯ ಎಂಬುದನ್ನು ಒಪ್ಪಲೇಬೇಕು. ಸಂಸ್ಕೃತ ಭಾಷೆಯ ಪರಿಜ್ಞಾನವಿಲ್ಲದೆಯೂ ವೈಚಾರಿಕವಾಗಿ ಉನ್ನತ ಮಟ್ಟದಲ್ಲಿ ಯೋಚಿಸಲು ಸಾಧ್ಯ ಎಂಬುದನ್ನು ಇಂದಿನ ಬುದ್ಧಿಜೀವಿಗಳು ಸಾಧಿಸಿ ತೋರಿಸಿರುವರು. ಸಂಸ್ಕೃತ ಬಾರದ ಇಂತಹ ಜನ ಮುಂದಿಡುವ ಪ್ರಖರವಾದ ಪ್ರತಿಗಾಮಿ ವಿಚಾರಗಳನ್ನು ಹೆಚ್ಚಿನ ಸಂಸ್ಕೃತ ವಿದ್ವಾಂಸರು ಸಹ ಸಮರ್ಪಕವಾಗಿ ಉತ್ತರಿಸಲಾರರು ಎಂಬುದು

ಜನರಿಗೆಲ್ಲಾ ತಿಳಿದ ವಿಷಯವೇ ಆಗಿದೆ. ಇದರ ಅರ್ಥ ಮಧ್ವಸಿದ್ಧಾಂತದ ಅಧ್ಯಯನಕ್ಕೆ ಸಂಸ್ಕೃತ ಭಾಷೆಯ ಜ್ಞಾನ ಅನಗತ್ಯ ಎಂದೇನೂ ಅಲ್ಲ. ಆದರೆ ಬೌದ್ಧಿಕ ಪರಿಪಾಕ ಹೊಂದಿದ ಜನರಿಗೆ ಸಂಸ್ಕೃತ ಭಾಷೆಯ ಪರಿಜ್ಞಾನವಿಲ್ಲದೆಯೂ ಒಂದು ಹಂತದವರೆಗೆ ಸಿದ್ಧಾಂತವನ್ನು ತಿಳಿದು ಅನುಸರಿಸಲು ಸಾಧ್ಯ, ಆ ದಿಸೆಯಲ್ಲಿ ಯೋಚಿಸುವ ಅಗತ್ಯ ಇದೆ ಎಂಬುದು ನನ್ನ ನಿಲುವು.

ಇಂದಿನ ದಿನಗಳಲ್ಲಿ ಮಧ್ವಸಿದ್ಧಾಂತದ ಬಗ್ಗೆ ಹೆಚ್ಚಿನ ಒಲವನ್ನು, ಅಪಾರ ನಿಷ್ಠೆಯನ್ನು ಹೊಂದಿದ ಬಹುಸಂಖ್ಯೆಯ ಜನ ಸಂಸ್ಕೃತ ಬಾರದವರು. ಆದರೆ ತಮ್ಮ ವಲಯಗಳಲ್ಲಿ ಅವರದು ಅಚ್ಚರಿ ಹುಟ್ಟಿಸುವಂತಹ ಸಾಧನೆಯಾಗಿರುತ್ತದೆ. ಅಂತಹವರು ಸಿದ್ಧಾಂತವನ್ನು ತಿಳಿಯಲು ಅನುವು ಮಾಡಿಕೊಡಬೇಕಾದ ಅಗತ್ಯ ಆ ಸಿದ್ಧಾಂತ ಬಲ್ಲವರಿಗೆ, ವಿಶೇಷವಾಗಿ ಮಠಮಾನ್ಯಗಳಿಗೆ ತಿಳಿಯಬೇಕು ಎಂಬುದು ನನ್ನ ಉದ್ದೇಶ. ಪ್ರವಚನಗಳಿಗೆ ಅದರಲ್ಲೂ ಅಂತರ್ಜಾಲದ ಮೂಲಕ ಪ್ರಸಾರಗೊಳ್ಳುವ ಪಾಠಪ್ರವಚನಗಳಿಗೆ ಹೆಚ್ಚು ತೆರೆದುಕೊಳ್ಳುವ ವರ್ಗ ಅಪಾರ ಸಂಖ್ಯೆಯಲ್ಲಿ ಕಾಣಸಿಗುತ್ತದೆ. ಅಂತಹವರಿಗೆ ಸಾಮಾನ್ಯ ಸಂಸ್ಕೃತ ಜ್ಞಾನವನ್ನು ಹುಟ್ಟಿಸಿ ವಿಶೇಷವಾಗಿ ಸಿದ್ಧಾಂತದ ಪರಿಜ್ಞಾನವನ್ನು ಅವರು ಹೊಂದಲು ಸಾಧ್ಯವಾಗುವಂತಹ ಯೋಜನೆಗಳನ್ನು ರೂಪಿಸುವ ಅಗತ್ಯ ಇಂದಿನ ದಿನಗಳಲ್ಲಿ ಬಹಳವಾಗಿ ಕಂಡುಬರುತ್ತದೆ.

ಇಂತಹ ಅಗತ್ಯದ ಹಿನ್ನಲೆಯಲ್ಲೇ ಹರಿದಾಸಸಾಹಿತ್ಯ ರೂಪುಗೊಂಡಿದ್ದು ಎಂಬುದನ್ನು ಗಮನಿಸಬಹುದು. ಅದೇಕೆ, ಸೂತ್ರ, ಭಾಷ್ಯ, ಟೀಕಾ - ಟಿಪ್ಪಣಿ, ವಾದಗ್ರಂಥಗಳು, ಖಂಡನ - ಮಂಡನಗಳು ಸಹ ರೂಪುಗೊಂಡದ್ದು ಇಂತಹ ಅಗತ್ಯಗಳನ್ನು ಪೂರೈಸಲೆಂದೇ ಎಂಬುದನ್ನು ಇತಿಹಾಸದಿಂದ ಮನಗಾಣಬಹುದು. ಇತ್ತೀಚಿನ ದಿನಗಳಲ್ಲಿ ಮಾತ್ರ ಜನತೆಯ ಅಗತ್ಯಕ್ಕೆ ಸ್ಪಂದಿಸುತ್ತ ಸಿದ್ಧಾಂತಪ್ರಸಾರಕ್ಕೆ ತೊಡಗಿಕೊಳ್ಳುವ ಯೋಜನೆಗಳ ಅಭಾವ ಎದ್ದು ಕಾಣುತ್ತದೆ. ಸಿದ್ಧಾಂತವನ್ನು ತಿಳಿದು ಅನುಸರಿಸಲಾಗದೆ ಸಮಾಜವನ್ನು ವಂಚಿಸುವ ವರ್ಗ ಒಂದೆಡೆಯಾದರೆ, ಸಿದ್ಧಾಂತದ ಪರಿಜ್ಞಾನವಿಲ್ಲದೆಯೂ ಅದನ್ನು ಅನುಸರಿಸಲು ಕಾತರಿಸುವ ಜಿಜ್ಞಾಸುವರ್ಗ ಮತ್ತೊಂದೆಡೆ. ಇವುಗಳ ಸಮತೋಲನ ಆಧುನಿಕ ಅಗತ್ಯಗಳಿಗೆ ಸ್ಪಂದಿಸುವ ರೀತಿಯ ಅಧ್ಯಯನಪದ್ಧತಿಯಿಂದ ಮಾತ್ರ ಸಾಧ್ಯ ಎಂಬುದನ್ನು ನಾವಿಂದು ಮನಗಾಣಬೇಕಿದೆ. ಹಿಂದಿನ ತತ್ತ್ವಪ್ರಸಾರದ ಕ್ರಾಂತಿಯೆಲ್ಲ ನಡೆದದ್ದು ಇಂತಹ ಪರಿಕಲ್ಪನೆಗಳ ಹಿನ್ನೆಲೆಯಲ್ಲಿಯೇ ಎಂಬುದು ಗಮನಾರ್ಹ. ಆಗೊಮ್ಮೆ ಈಗೊಮ್ಮೆ ನಡೆಯುವ ಸಭೆ - ಸಮ್ಮೇಳಗಳಿಂದ ಈ ಕೆಲಸ ಆಗುವಂತಹದ್ದಲ್ಲ ಎಂಬುದನ್ನು ಈ ಹಿಂದೆಯೇ ವಿವರವಾಗಿ ತಿಳಿಸಲಾಗಿದೆ. ತುರ್ತಾಗಿ ಈ ದಿಸೆಯಲ್ಲಿ ಮುಂದುವರಿಯಲು ಸಂಕ್ಷಿಪ್ತವಾದ ಮಾರ್ಗಸೂಚಿಯ ಒಂದು ಪರಿಕಲ್ಪನೆಯನ್ನು ಮುಂದಿನ ಸಂಚಿಕೆಯಲ್ಲಿ ವಿವೇಚಿಸಲಾಗುವುದು.





# ಪಾಪಪುರುಷನ ವಿಸರ್ಜನೆಯ ಅನುಸಂಧಾನ

– ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

'ಆದಾವೇವ ಜಪೇ ಕುರ್ಯಾಚ್ಛೋಷಣಂ ದಹನಂ ಪ್ಲುತಿಮ್ ।
ವಾಯ್ವಗ್ನಿವಾರುಣೈರ್ಬೀಜೈರ್ಧ್ಯಾತ್ವಾ ತನ್ಮಂಡಲೇ ಹರಿಮ್ ॥'

- ಎಂದು ತಂತ್ರಸಾರಸಂಗ್ರಹದಲ್ಲಿ (೨-೬) ಶ್ರೀಮಧ್ವರು ಜಪದ ಸಂದರ್ಭದಲ್ಲಿ ಮೊದಲು ವಾಯು - ಅಗ್ನಿ - ವರುಣರ ಬೀಜಾಕ್ಷರಗಳಿಂದ ಉದರದಲ್ಲಿರುವ ವಾಯುಮಂಡಲ, ಹೃದಯದಲ್ಲಿರುವ ಅಗ್ನಿಮಂಡಲ ಹಾಗೂ ಶಿರಸ್ಸಿನಲ್ಲಿರುವ ವಾರುಣಮಂಡಲ - ಇವುಗಳಲ್ಲಿ ಪ್ರದ್ಯುಮ್ನ, ಅನಿರುದ್ಧ, ವಾಸುದೇವರೂಪಗಳಿಂದ ಇರುವ ಶ್ರೀಹರಿಯನ್ನು ಧ್ಯಾನಿಸಿ ಪಾಪಪುರುಷನ ಶೋಷಣೆಯನ್ನೂ, ದಹನವನ್ನೂ, ಶರೀರಕ್ಷಾಲನವನ್ನೂ ನಡೆಸಲೇಬೇಕು (ಕುರ್ಯಾದೇವ)- ಎಂದು ತಿಳಿಸಿರುವರು.

ಆದ್ದರಿಂದ ಗಾಯತ್ರೀಜಪವನ್ನೂ, ನಾರಾಯಣಾಷ್ಟಾಕ್ಷರಾದಿಮಂತ್ರ-ಜಪವನ್ನೂ ಒಳಗೊಂಡಿರುವ ಸಂಧ್ಯಾವಂದನೆಯಲ್ಲೂ ಪಾಪಪುರುಷನ ವಿಸರ್ಜನೆಯನ್ನು ನಡೆಸಲೇಬೇಕು. ಆಚಾರ್ಯರ ತಂತ್ರಸಾರಸಂಗ್ರಹದ 'ಆದಾವೇವ...' ಎಂಬ ಮಾತಿನಲ್ಲಿ 'ಆದಾವೇವ...' ಎಂಬಲ್ಲಿ ಬಳಸಲಾದ 'ಏವ'ಕಾರವನ್ನು 'ಕುರ್ಯಾತ್' ಶಬ್ದಕ್ಕೆ ಅನ್ವಯಿಸಿ 'ಕುರ್ಯಾದೇವ' - ಮಾಡಲೇಬೇಕು - ಎಂಬ ಅರ್ಥವನ್ನು ಹೊರಡಿಸುವ ಮೂಲಕ ಯಾವುದೇ ನೆಪವೊಡ್ಡಿ ಪಾಪಪುರುಷವಿಸರ್ಜನೆಯನ್ನು ಮಾಡದಿರುವುದನ್ನು ವಿರೋ-ಧಿಸುವುದು.

## ಪಾಪಪುರುಷ ಯಾರು?

ಆಚಾರ್ಯರು 'ಆದಾವೇವ...' ಎಂಬ ಮಾತಿನಲ್ಲಿ ಶೋಷಣಾದಿಗಳನ್ನು ನಡೆಸಬೇಕೆಂದು ತಿಳಿಸಿರುವರೇ ಹೊರತು ಯಾರ ಶೋಷಣಾದಿಗಳನ್ನು ನಡೆಸಬೇಕೆಂದು ತಿಳಿಸಿಲ್ಲ. ಸ್ಮೃತಿಗಳಲ್ಲಿ ಪ್ರಸಿದ್ಧವಾಗಿರುವಂತೆ ಪಾಪಪುರುಷನ

ಶೋಷಣಾದಿಗಳನ್ನು ನಡೆಸಬೇಕು - ಎಂಬುದಕ್ಕೆ 'ನಡೆಸಲೇಬೇಕು' (ಕುರ್ಯಾದೇವ) ಎಂಬ ಒತ್ತನ್ನೂ, ವಾಯ್ವಾದಿಮಂಡಲಗಳಲ್ಲಿ ವಾಯ್ವಾದಿಗಳಿಗೆ ಪ್ರದ್ಯುಮ್ನಾದಿರೂಪಗಳಿಂದ ಪ್ರೇರಕನಾಗಿರುವ ಶ್ರೀಹರಿಯನ್ನು ವಾಯ್ವಾದಿಬೀಜಮಂತ್ರಗಳ ಮುಖ್ಯವಾಚ್ಯನನ್ನಾಗಿ ಧ್ಯಾನಿಸುತ್ತ (ಧ್ಯಾತ್ವಾ ತನ್ಮಂಡಲೇ ಹರಿಮ್) - ಎಂಬ ಅಂಶವನ್ನೂ ಸೇರಿಸಿ ಪ್ರಸ್ತುತಪಡಿಸಿರುವರಷ್ಟೇ.

ಆದುದರಿಂದ ಪಾಪಪುರುಷನ ಸ್ವರೂಪವನ್ನು ಸ್ಮೃತಿಗಳಿಂದ ತಿಳಿದುಕೊಳ್ಳ-ಬೇಕು.

ಸ್ಮೃತಿಮುಕ್ತಾವಲಿಯಲ್ಲಿ ಉದಾಹರಿಸಿರುವ 'ಸಂಗ್ರಹ' ಪಾಪಪುರುಷನನ್ನು ಹೀಗೆ ನಿರೂಪಿಸುವುದು -

**''ಬ್ರಹ್ಮಹತ್ಯಾಶಿರಸ್ಕಂ ಚ ಸ್ವರ್ಣಸ್ತೇಯ ಭುಜದ್ವಯಮ್ ।**
**ಸುರಾಪಾನಹೃದಾಯುಕ್ತಂ ಗುರುತಲ್ಪಕಟಿದ್ವಯಮ್ ।**
**ತತ್ಸಂಯೋಗಪದದ್ವಂದ್ವಮಂಗಪ್ರತ್ಯಂಗಪಾತಕಮ್ ।**
**ಉಪಪಾತಕರೋಮಾಣಂ ರಕ್ತಶ್ಮಶ್ರುವಿಲೋಚನಮ್ ।**
**ಖಡ್ಗಚರ್ಮಧರಂ ಕೃಷ್ಣಂ ಕುಕ್ಷೌ ಪಾಪಂ ವಿಚಿಂತಯೇತ್ ॥''**

ಬ್ರಹ್ಮಹತ್ಯೆಯೇ ಶಿರಸ್ಸಾಗಿ ಉಳ್ಳ, ಸ್ವರ್ಣಸ್ತೇಯ ಅಪರಾಧ ಎರಡು ಭುಜಗಳಾಗಿ ಉಳ್ಳ, ಸುರಾಪಾನ ಹೃದಯವಾಗಿ ಉಳ್ಳ, ಗುರುಸ್ಥಾನೀಯರ ಪತ್ನಿಯರ ಬಗ್ಗೆ ಕೆಟ್ಟ ದೃಷ್ಟಿ ತಾಳುವ ಅಪರಾಧವೇ ತೊಡೆಗಳಾಗಿ ಉಳ್ಳ, ಈ ಐದು ಪಾತಕಗಳನ್ನೆಸಗಿದವರ ಸಂಯೋಗ ಎಂಬ ಅಪರಾಧವೇ ಎರಡು ಕಾಲುಗಳಾಗಿ ಉಳ್ಳ, ಪಾತಕಗಳೆನಿಸುವ ಪಾಪಗಳೇ ಅಂಗ ಹಾಗೂ ಪ್ರತ್ಯಂಗಗಳಾಗಿ ಉಳ್ಳ, ಉಪಪಾತಕಗಳೆನಿಸುವ ಪಾಪಗಳೇ ರೋಮಗಳಾಗಿ ಉಳ್ಳ ಕೆಂಪು ಮೀಸೆಯ, ಕೆಂಪು ಕಣ್ಣಿನ, ಖಡ್ಗ ಹಾಗೂ ಗುರಾಣಿಗಳನ್ನು ಧರಿಸಿರುವ ಕಪ್ಪು ಬಣ್ಣದ ಪಾಪಪುರುಷನನ್ನು ಎಡ ಉದರದಲ್ಲಿ ಚಿಂತಿಸಬೇಕು.

ಯಾರ್ಯಾರೋ ಎಸಗಿದ ಪಾಪಗಳ ಮೂರ್ತಿಯನ್ನಲ್ಲ; ''ಸ್ವದೇಹಸ್ಥಮಘಂ ಕೃತ್ಸ್ನಂ ಚಿಂತಯೇತ್...' ಎಂದು ವಾಸಿಷ್ಠದಲ್ಲಿ ತಿಳಿಸಿರುವಂತೆ ನಾವು ಈ ದೇಹ ಮಾಧ್ಯಮದಲ್ಲಿ ಮಾಡಿರುವ ಪಾಪಗಳನ್ನೇ ಹೀಗೆ ಚಿಂತಿಸಬೇಕು. ಬಹುಜನ್ಮಗಳನ್ನು ಆರಂಭಿಸಿ ನಮ್ಮಲ್ಲಿ ಕ್ರೋಢೀಕೃತವಾದ ಪಾಪವನ್ನು ಹೀಗೆ ಚಿಂತಿಸಬೇಕು - 'ಬಹುಜನ್ಮ ಆರಭ್ಯ ಸ್ವಸ್ಮಿನ್ ವಿದ್ಯಮಾನಮಘಂ ಚಿಂತಯೇತ್' ಇತಿ ಪ್ರತೀಯತೇ - ಎಂದು ಸೂಚಿಸುವ ಸ್ಮೃತಿಮುಕ್ತಾವಲಿಕಾರರು ಆ



ವಿಷಯದಲ್ಲಿ 'ವೃದ್ಧಾಃ ಪ್ರಷ್ಟವ್ಯಾಃ' - ಜ್ಞಾನಿಗಳಲ್ಲಿ ವಿಚಾರ ನಡೆಸಬೇಕೆಂದು ತಿಳಿಸಿರುವರು.

ಪ್ರಾಯಶಃ ಪ್ರಕೃತಜನ್ಮದಲ್ಲಿ ಪಂಚಮಹಾಪಾತಕಗಳನ್ನೂ, ಪಾತಕಗಳನ್ನೂ, ಉಪಪಾತಕಗಳನ್ನೂ ಎಸಗಲು ಸಾಧ್ಯವೇ ಇಲ್ಲ - ಎಂಬುದಕ್ಕಾಗಿ ಹಿಂದಿನ ಜನ್ಮಗಳಲ್ಲಿ ಎಸಗಿದ ಪಾಪಗಳ ಪರಾಮರ್ಶೆ ಇಲ್ಲಿ ನಡೆಸಲಾಗಿದೆ ಎಂಬ ತೀರ್ಮಾನಕ್ಕೆ ಬಂದಿದ್ದಿರಬಹುದು. ಆದರೆ ಪ್ರತಿನಿತ್ಯ ಪ್ರತಿಯೊಂದು ಜಪದ ಸಂದರ್ಭದಲ್ಲೂ ಹೀಗೆ ಪಾಪಪುರುಷನ ವಿಸರ್ಜನೆ ನಡೆಸಲಾಗುವ ಪ್ರಯುಕ್ತ ಆಯಾ ದಿನದಲ್ಲಿ ಆಯಾ ಹೊತ್ತಿನಲ್ಲಿ ಎಸಗಲಾದ ಪಾಪದ ಬಗ್ಗೆಯೇ ಈ ಬಗೆಯ ಪ್ರಕ್ರಿಯೆ ಎಂಬುದು ಸಮುಚಿತವೆನಿಸುವುದು. ಹೇಗೆ ಸಂಧ್ಯಾವಂದನೆಯ 'ಜಲಾಭಿಮಂತ್ರಣ'ದಲ್ಲಿ 'ಯದ್ರಾತ್ರ್ಯಾ ಪಾಪಮಕಾರ್ಷಂ' 'ಯದಹ್ನಾ ಪಾಪಮಕಾರ್ಷಂ' ಎಂದು ಆಯಾ ಹೊತ್ತಿನಲ್ಲಿ ಎಸಗಿದ ಪಾಪವನ್ನೇ ಪರಾಮರ್ಶಿಸಿ ಪರಿಹರಿಸಲಾಗುವುದೋ ಹಾಗೆ.

ಆದರೆ ಒಂದೊಂದು ಹೊತ್ತಿನಲ್ಲಿ ಇಷ್ಟೊಂದು ಪಾಪವನ್ನು ಎಸಗುವುದು ಸಂಭಾವಿತವೇ? - ಎಂಬ ಸಂದೇಹ ಸಹಜ. ನೇರವಾಗಿ ಬ್ರಹ್ಮಹತ್ಯೆ ಇತ್ಯಾದಿಗಳನ್ನು ಎಸಗಲಾಗುವುದಿಲ್ಲವಾದರೂ ಶಾಸ್ತ್ರದಲ್ಲಿ ಬ್ರಹ್ಮಹತ್ಯೆ ಇತ್ಯಾದಿ ಪಾಪಗಳಿಗೆ ಸಮಾನಗಳೆಂದು ಪರಿಗಣಿತವಾಗಿರುವ ಪಾಪಗಳನ್ನು ಎಸಗುವ ಸಾಧ್ಯತೆ ಇದ್ದೇ ಇದೆ. ಬ್ರಾಹ್ಮಣನನ್ನು ಕೊಲ್ಲುವುದಲ್ಲದಿದ್ದರೂ ಅವನನ್ನು ಅವಮಾನಗೊಳಿಸುವ ಮೂಲಕ ಬ್ರಹ್ಮಹತ್ಯೆ ಎಸಗಬಹುದು ತಾನೇ? ಚಿನ್ನವನ್ನು ನೇರವಾಗಿ ಕದಿಯದಿದ್ದರೂ ಮಾನಸಿಕವಾಗಿ ಯಾರದ್ದೋ ಆಭರಣವನ್ನು ತನ್ನದ್ದನ್ನಾಗಿ ಭಾವಿಸುವ ಮೂಲಕವಾದರೂ 'ಸ್ವರ್ಣಸ್ತೇಯ'ವನ್ನು ಎಸಗಬಹುದು ತಾನೇ? ಸುರೆಯನ್ನೇ ಪಾನ ನಡೆಸದಿದ್ದರೂ ನಿಂತುಕೊಂಡು ನೀರು ಕುಡಿಯುವುದೇ ಮುಂತಾದ ನಿಷಿದ್ಧ ಚಟುವಟಿಕೆಯ ಮೂಲಕ 'ಸುರಾಪಾನ'ವನ್ನು ಎಸಗಬಹುದು ತಾನೇ? ಗುರುಸ್ಥಾನಿಯರ ಪತ್ನಿಯರ ಬಗ್ಗೆ ಕೆಟ್ಟ ಭಾವನೆ ತಾಳಿ 'ಗುರುತಲ್ಪ'ವನ್ನು ಎಸಗಬಹುದು ತಾನೇ? ಪಾತಕಿಗಳ ಸಂಯೋಗವನ್ನಂತೂ ಸಾಕಷ್ಟು ಪ್ರಮಾಣಗಳಲ್ಲಿ ನಡೆಸುತ್ತಲೇ ಇರುವೆವು. ಹೀಗೆ ಪಂಚಪಾತಕಗಳೂ ನಮ್ಮಿಂದ ಆಗಾಗ್ಗೆ ಎಸಗಲ್ಪಡುತ್ತ ಇರುವುದರಿಂದ ಅಂತಹ ಪಾತಕಗಳೇ ಅಂಗಾಂಗಗಳಾಗಿ ಉಳ್ಳ ಪಾಪಪುರುಷನ ಚಿಂತನೆ ನಡೆಸಬಹುದಾಗಿದೆ.

**ಅಭಿಮಾನಿ ವ್ಯಪದೇಶಸ್ತು:**

‘ಬ್ರಹ್ಮಹತ್ಯಾಶಿರಸ್ಕಂ ಚ.... ವಿಚಿಂತಯೇತ್’ - ಎಂಬ ಮಾತನ್ನು ನೋಡುವಾಗ ನಮ್ಮ ಬ್ರಹ್ಮಹತ್ಯೆಯೇ ಮುಂತಾದ ಪಾಪಗಳನ್ನೆಲ್ಲ ಒಟ್ಟು ಸೇರಿಸಿ ಹೀಗೆ ಬರೇ ಚಿಂತಿಸಬೇಕೆಂದು ತಿಳಿಸುತ್ತಿರುವಂತೆ ಕಾಣಿಸುವುದು. ಆದರೆ ‘ನ ಹ್ಯನ್ಯದನ್ಯ ಇತ್ಯೇವಂ ಧ್ಯಾತಂ ಸ್ಯಾತ್ ಪುರುಷಾರ್ಥದಮ್’ - ಎಂದು ಸಾಮಸಂಹಿತೆ (ಭಾ.ಉ.ಭಾ. ೭-೧-೫) ಎಚ್ಚರಿಸುತ್ತಿರುವಂತೆ ವಾಸ್ತವಿಕವಾಗಿ ಅಲ್ಲದಿದ್ದದ್ದನ್ನು ‘ಅದು ಹಾಗೆ’ - ಎಂದು ಚಿಂತಿಸಿದಲ್ಲಿ ಪುರುಷಾರ್ಥಪ್ರದವಲ್ಲ; ಬದಲಾಗಿ ಅನರ್ಥಪ್ರದ ಆಗಬಲ್ಲದುದರಿಂದ ಜಡವಾದ ಪಾಪವನ್ನು ಪಾಪಪುರುಷನೆಂದು ಚಿಂತಿಸಿದಲ್ಲಿ ಅನರ್ಥ ಆದೀತು. ಆದುದರಿಂದ ‘ಅಭಿಮಾನಿವ್ಯಪದೇಶಸ್ತು...’ ಎಂಬ ಸೂತ್ರ ಸಿದ್ಧಾಂತಿಸುತ್ತಿರುವಂತೆ ಬ್ರಹ್ಮಹತ್ಯೆಯೇ ಮುಂತಾದ ಮಹಾಪಾತಕಗಳ ಅಭಿಮಾನಿ ಅಸುರರೇ ಸೇರಿ ಪಾಪಪುರುಷನ ಪಾಪಪುರುಷನ ನಿರ್ಮಾಣ ಮಾಡುವರು. ಬ್ರಹ್ಮಹತ್ಯೆಯೇ ಶಿರಸ್ಸಾಗಿ ಉಳ್ಳವನೆಂಬುದೆಲ್ಲ ಪಾಪಪುರುಷನ ಸಾಂಕೇತಿಕ ನಿರೂಪಣೆ.

ಅಂತೂ ನಮ್ಮ ಎಲ್ಲ ಪಾಪಗಳನ್ನು ವಿವೇಚಿಸಿಕೊಂಡು ಅವನ್ನು ಎಸಗಲು ಪ್ರೇರಿಸುವ ಅಸುರರ ಗುಂಪನ್ನು ‘ಪಾಪಪುರುಷ’ ಎಂದು ಭಾವಿಸಿ ಅವನ ದಹನಾದಿಗಳನ್ನು ನಡೆಸಬೇಕು.

(ಮುಂದಿನ ಸಂಚಿಕೆಯಲ್ಲಿ: ಪಾಪಪುರುಷನ ದಹನಾದಿಗಳ ಅನುಸಂಧಾನ)

*****

**ಅಂತರ್ಜಾಲದಲ್ಲಿ ಪ್ರವಚನ ಹಾಗೂ ನೇರಪ್ರಸಾರ**

**www.livepravachana.com** ಅಂತರ್ಜಾಲ ತಾಣದಲ್ಲಿ ಕಳೆದ ಒಂದು ವರ್ಷದಿಂದ ಪ್ರವಚನಗಳು ಹಾಗೂ ಪಾಠ ನೇರಪ್ರಸಾರವಾಗುತ್ತಿದ್ದು ಬಹಳಷ್ಟು ಮಾಧ್ವರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ. ಈಗ ಕಾರ್ಯಕ್ರಮದ ವಿವರವನ್ನು ಮೊಬೈಲ್ ದೂರವಾಣಿಗೆ ಉಚಿತವಾಗಿ ಕಳುಹಿಸುವ ಸೌಲಭ್ಯವನ್ನು ಪ್ರಾರಂಭಿಸಿದ್ದೇವೆ. ಇದಕ್ಕಾಗಿ **ON LIVEPRAVACHANA** ಎಂದು **09870807070** ಸಂಖ್ಯೆಗೆ **sms** ಕಳುಹಿಸಬೇಕು. ಇದು ಸಂಪೂರ್ಣ ಉಚಿತವಾದ ಸೇವೆ. ಇದರ ಪ್ರಯೋಜನವನ್ನು ಜಿಜ್ಞಾಸುಗಳು ಪಡೆದುಕೊಳ್ಳಬಹುದು.




# ಅಯನಗಳ ಆರಂಭ

– ಜಯಂತ ವ್ಯಾಸನಕೆರೆ

ವರ್ಷದಲ್ಲಿ ಎರಡು ಅಯನಗಳು: ಉತ್ತರಾಯಣ ಮತ್ತು ದಕ್ಷಿಣಾಯನ. ಕೆಲವರು Jan 14/15 ರಿಂದ July 15/16 ರ ವರೆಗೆ ಉತ್ತರಾಯಣವೆಂದೂ, ವರ್ಷದ ಉಳಿದರ್ಧವನ್ನು ದಕ್ಷಿಣಾಯನವೆಂದೂ ಆಚರಿಸುವುದುಂಟು. ಇನ್ನು ಕೆಲವರು Dec 21/22 ರಿಂದ June 20/21 ರ ವರೆಗೆ ಉತ್ತರಾಯಣವೆಂದೂ, ಉಳಿದರ್ಧವನ್ನು ದಕ್ಷಿಣಾಯನವೆಂದೂ ಆಚರಿಸುತ್ತಾರೆ. ಈ ವಿಷಯದ ಬಗ್ಗೆ ಪ್ರತ್ಯಕ್ಷದ ನಿಲುವನ್ನು ಇಲ್ಲಿ ಸಮರ್ಥಿಸಲಾಗಿದೆ[1].

ಸಾಮಾನ್ಯವಾಗಿ ದಿಕ್ಕುಗಳು ನಾಲ್ಕು, ಸೂರ್ಯನು ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುತ್ತಾನೆ ಎಂಬುದಾಗಿ ವ್ಯವಹರಿಸುತ್ತೇವೆ. ಸೂಕ್ಷ್ಮವಾಗಿ ಗಮನಿಸಿ ಹೇಳುವುದಾದರೆ ವರ್ಷದುದ್ದಕ್ಕೂ ಸೂರ್ಯೋದಯ ಹಾಗೂ ಸೂರ್ಯಾಸ್ತಗಳು ಕ್ರಮವಾಗಿ ಪೂರ್ವ ಹಾಗೂ ಪಶ್ಚಿಮದ ಬಳಿ ಬದಲಾವಣೆಯಾಗುತ್ತಿರುತ್ತವೆ.




ಚಿತ್ರದಲ್ಲಿ ನಾವು ‘O’ ಎಂಬಲ್ಲಿದ್ದೇವೆ ಎಂದುಕೊಳ್ಳಿ. ವರ್ಷದಲ್ಲಿ ಸೂರ್ಯೋದಯವು ಪೂರ್ವಕ್ಕೆ $23.5^0$ ದಕ್ಷಿಣದಿಂದ $23.5^0$ ಉತ್ತರದವರೆಗೆ ದಿನದಿನಕ್ಕೆ ವ್ಯತ್ಯಾಸವಾಗುತ್ತದೆ. ಅದರಂತೆ ಮುಳುಗುವ ದಿಕ್ಕು ಪಶ್ಚಿಮಕ್ಕೆ $23.5^0$

1. ಸೂರ್ಯಕೇಂದ್ರೀಯ (heliocentric) ಹಾಗೂ ಭೂಕೇಂದ್ರೀಯ (geocentric) ಪದ್ಧತಿಗಳು ಸಮಾನ ಫಲಿತಾಂಶ ನೀಡುವುದರಿಂದ ಸರಳತೆಗಾಗಿ ಇಲ್ಲಿ ಪ್ರಧಾನವಾಗಿ ಭೂಕೇಂದ್ರೀಯ ಪದ್ಧತಿಯನ್ನು ಅಳವಡಿಸಲಾಗಿದೆ. ಹಾಗೂ ಇಲ್ಲಿನ ಉದಯಾಸ್ತಮಾನದ ವಿಷಯಗಳು ಸಮಭಾಜಕವೃತ್ತದ (equator) ಬಳಿ ನಿಖರವಾಗಿದ್ದು ಇತರೆಡೆ ಸೂಕ್ತ ವ್ಯತ್ಯಾಸ ಹೊಂದುತ್ತವೆ.

ದಕ್ಷಿಣದಿಂದ 23.5° ಉತ್ತರದವರೆಗೆ ವ್ಯತ್ಯಾಸವಾಗುತ್ತದೆ. ಉದಾಹರಣೆಗೆ ಸೂರ್ಯನು ಚಿತ್ರದಲ್ಲಿ ಸೂಚಿಸಿದಂತೆ A ದಿಕ್ಕಿನಲ್ಲಿ ಹುಟ್ಟಿದರೆ ಅಂದು a ದಿಕ್ಕಿನಲ್ಲಿ ಮುಳುಗುವನು. B ನಲ್ಲಿ ಹುಟ್ಟಿದರೆ b ನಲ್ಲಿ ಮುಳುಗುವನು, ಇತ್ಯಾದಿ[1].

ಸೂರ್ಯೋದಯದ ದಿಕ್ಕು A ಇಂದ E ವರೆಗೂ, ಅಂದರೆ ಉತ್ತರದೆಡೆಗೆ, ವ್ಯತ್ಯಾಸವಾಗುವುದಕ್ಕೆ (ಅದೇ ವೇಳೆ ಮುಳುಗುವ ದಿಕ್ಕು a ಇಂದ e ವರೆಗೂ ವ್ಯತ್ಯಾಸವಾಗುವುದಕ್ಕೆ) ಅರ್ಧ ವರ್ಷ ಬೇಕಾಗುತ್ತದೆ. ಇದನ್ನು ಉತ್ತರಾಯಣವೆನ್ನುತ್ತೇವೆ. ಹಿಂತಿರುಗಿ E ಇಂದ A ವರೆಗೂ, ಅಂದರೆ ದಕ್ಷಿಣದೆಡೆಗೆ, ವ್ಯತ್ಯಾಸವಾಗುವುದಕ್ಕೆ (ಅದೇ ವೇಳೆ ಮುಳುಗುವ ದಿಕ್ಕು e ಇಂದ a ವರೆಗೂ ವ್ಯತ್ಯಾಸವಾಗುವುದಕ್ಕೆ ಮತ್ತರ್ಧವರ್ಷ ಬೇಕು. ಇದನ್ನು ದಕ್ಷಿಣಾಯನವೆನ್ನುತ್ತೇವೆ. ಅಂದರೆ ಸೂರ್ಯನು ಸರಿಯಾಗಿ ಪೂರ್ವದಲ್ಲಿ ಹುಟ್ಟಿ, ಸರಿಯಾಗಿ ಪಶ್ಚಿಮದಲ್ಲಿ ಮುಳುಗುವುದು ವರ್ಷಕ್ಕೆ ಎರಡೇ ಬಾರಿ!

ಹಾಗಾದರೆ ಸೂರ್ಯನು A ಎಂಬಲ್ಲಿ ಹುಟ್ಟಿ a ಎಂಬಲ್ಲಿ ಮುಳುಗುವ ದಿನದಂದು ಉತ್ತರಾಯಣಪರ್ವಕಾಲ. ಅಂತಹ ದಿನ ವರ್ಷದಲ್ಲಿ ಯಾವುದೆಂದು ಕಂಡು ಹಿಡಿಯುವುದು ಸುಲಭವಾದ ಕೆಲಸ. ಪ್ರತಿದಿನವೂ ಸೂರ್ಯೋದಯ ಅಥವಾ ಸೂರ್ಯಾಸ್ತವನ್ನು ಗಮನಿಸುತ್ತಿದ್ದರೆ ಸಾಕು. ಹಾಗೆ ಗಮನಿಸಿದಾಗ Dec 21/22 ದಿನಾಂಕವು ಅಂತಹುದೆಂದು ತಿಳಿಯುತ್ತದೆ. ಅಂದರೆ, Dec 21/22 ರಂದು ಸೂರ್ಯನು ಪೂರ್ವ-ಪಶ್ಚಿಮ ರೇಖೆಗೆ ಪರಮಾವಧಿ ದಕ್ಷಿಣದಲ್ಲಿರುತ್ತಾನೆ. ಅಂದಿನಿಂದ ಉತ್ತರಾಯಣ. Mar 20/21 ರಂದು ಸರಿಯಾಗಿ ಪೂರ್ವಕ್ಕೆ ಹುಟ್ಟಿ ಸರಿಯಾಗಿ ಪಶ್ಚಿಮಕ್ಕೆ ಮುಳುಗುವನು (ಚಿತ್ರದಲ್ಲಿ C ಮತ್ತು c). June 20/21 ರಂದು ಪರಮಾವಧಿ ಉತ್ತರಕ್ಕಿರುತ್ತಾನೆ. ಅಂದಿನಿಂದ ಹುಟ್ಟುವ/ ಮುಳುಗುವ ದಿಕ್ಕು ದಕ್ಷಿಣದೆಡೆಗೆ ಸಂಚರಿಸಲಾರಂಭಿಸುತ್ತದೆ. ಅಂದಿನಿಂದ ದಕ್ಷಿಣಾಯನ. Sept 22/23 ರಂದು ಮತ್ತೊಮ್ಮೆ ಸರಿಯಾಗಿ ಪೂರ್ವದಲ್ಲಿ ಹುಟ್ಟು, ಪಶ್ಚಿಮದಲ್ಲಿ ಅಸ್ತ. ಹೀಗೆ ಸೂರ್ಯನ ಪ್ರತಿದಿನದ ಗತಿ ವರ್ಷದಲ್ಲಿ ಬದಲಾವಣೆಯಾಗುತ್ತದೆ.

ಈ ನಿರ್ಧಾರಕ್ಕೆ ಇನ್ನೂ ಕೆಲವು ಸಾಕ್ಷಿಗಳು :-

೧. ನಿಮ್ಮ ಮನೆಯಂಗಳದಲ್ಲೇ ಮಾಡಬಹುದಾದಂತಹ ಪ್ರಯೋಗ. ಯಾವುದಾದರೂ ಸ್ಥಿರ ಪದಾರ್ಥದ ನೆರಳಿನ ಗಾತ್ರವನ್ನು Dec 21/22 ಅಥವಾ June 20/21 ರ ಹಿಂದಿನ ಹಾಗೂ ಮುಂದಿನ ಒಂದು ವಾರ ಪ್ರತಿದಿನವೂ ನಿಯತಸಮಯಕ್ಕೆ ಸರಿಯಾಗಿ ಅಳೆಯಿರಿ. Dec 21/22 ಹಾಗೂ June 20/21 ರಂದು ಆ ಗಾತ್ರವು


1. ಭೂಮಿಯು ಪ್ರತಿದಿನ ತನ್ನ ಸುತ್ತ ಸುತ್ತುವ ಕಕ್ಷೆ ಹಾಗೂ ವಾರ್ಷಿಕವಾಗಿ ಸೂರ್ಯನ ಸುತ್ತ ಸುತ್ತುವ ಕಕ್ಷೆಗಳ ನಡುವಿನ ಕೋನವು $23.5^0$ ಆಗಿರುವುದೇ ಇದರ ಮೂಲ.



ಅತಿಹೆಚ್ಚು /ಅತಿಕಡಿಮೆ ಇರುತ್ತದೆ. ಸ್ವಲ್ಪ ಯೋಚಿಸಿದಲ್ಲಿ, ಇದು ಅಯನಗಳ ಆರಂಭದ ಲಕ್ಷಣ ಎಂದು ನೀವೇ ಹೇಳುವಿರಿ.

೨. ದಿನದ 24 ಘಂಟೆಗಳು ಹಗಲು-ರಾತ್ರಿಗಳ ನಡುವೆ ಹೇಗೆ ವಿಭಾಗವಾಗುತ್ತದೆ ಎಂಬುದನ್ನು ಗಮನಿಸಿ. ಉತ್ತರಾಯಣದ ಆರಂಭದ ದಿನದಂದು (Dec 21/22) ಹಗಲಿನ ಪ್ರಮಾಣ (ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ಅವಧಿ), ವರ್ಷದ ಬೇರೆಲ್ಲ ದಿನಗಳಿಗೆ ಹೋಲಿಸಿದಲ್ಲಿ ಅತಿಕಡಿಮೆ ಇರುತ್ತದೆ. ಅಂದರೆ ರಾತ್ರಿಯ ಪ್ರಮಾಣ ಪರಮಾವಧಿ ಇರುತ್ತದೆ. ಹಾಗೆಯೇ ದಕ್ಷಿಣಾಯನದ ಆರಂಭದ ದಿನದಂದು (June 20/21) ಹಗಲಿನ ಪ್ರಮಾಣ ಪರಮಾವಧಿ ಇದ್ದು, ರಾತ್ರಿಯು ಅತಿ ಕಡಿಮೆ ಇರುವುದು.[1]

ಪಂಚಾಂಗಗಳಲ್ಲಿ ಪ್ರತಿದಿನದ ಹಗಲಿನ ಪ್ರಮಾಣವನ್ನು ಕೊಟ್ಟಿರುತ್ತಾರೆ. ಅಥವಾ ಸೂರ್ಯೋದಯ ಹಾಗೂ ಸೂರ್ಯಾಸ್ತಗಳ ಸಮಯಗಳಿಂದ ಲೆಕ್ಕಹಾಕಬಹುದು. ಉದಾಹರಣೆಗೆ, ಅಂತಹ ನಕ್ಷೆಗಳು [2] ಕೆಳಕಂಡಂತಿರುತ್ತವೆ:





The Indian Astronomical Ephemeris - 2009,
India Meteorological Department, Govt. of India

1. ಯಾವತ್ ದಕ್ಷಿಣಾಯನಮಹಾನಿ ವರ್ಧಂತೇ ಯಾವದುದಗಯನಂ ರಾತ್ರಯಃ ॥

- ಭಾಗವತ (5/21/7)

2. ಹಗಲು ಹೆಚ್ಚಿರುವ ದಿನಗಳು ವರ್ಷದಲ್ಲಿ ಅರ್ಧಕ್ಕಿಂತ ಹೆಚ್ಚಿರುವುದಕ್ಕೆ ವಾತಾವರಣದಿಂದುಂಟಾದ ಬೆಳಕಿನ ವಕ್ರೀಭವನ ಕಾರಣ. ಆದರೆ ಇದರಿಂದ ಅತಿಹೆಚ್ಚು/ ಅತಿಕಡಿಮೆ ಹಗಲಿರುವ ದಿನ ವ್ಯತ್ಯಾಸವಾಗುವುದಿಲ್ಲ.




ದೃಗ್ಗಣಿತಸಹಿತ ಸೂರ್ಯಸಿದ್ಧಾಂತಪಂಚಾಂಗಮ್, ಉತ್ತರಾದಿಮಠ
(ಸರ್ವಧಾರಿ ಹಾಗೂ ವಿರೋಧಿನಾಮ ಸಂವತ್ಸರಗಳು - ೨೦೦೮-೨೦೧೦)

ಉತ್ತರಾಯಣವನ್ನು Jan 14/15 ರಿಂದ ಆಚರಿಸುವ ಪಂಚಾಂಗಗಳಲ್ಲೂ ಈ ಆಧಾರ ಮೂಡಿಬಂದಿರುವುದು ವಿಶೇಷ. ಈಗಾಗಲೇ ಕೆಲವು ಮಾಧ್ವಪಂಚಾಂಗಗಳಲ್ಲಿ ಉತ್ತರಾಯಣಪರ್ವಕಾಲವನ್ನು Dec 21/22ರಂದು ಮುದ್ರಿಸಿರುವುದನ್ನು ಗಮನಿಸಬೇಕು.

೩. ಬೆಂಗಳೂರಿನ ಗವಿಗಂಗಾಧರೇಶ್ವರ ದೇವಸ್ಥಾನದಲ್ಲಿ ಪ್ರತಿವರ್ಷವೂ Jan 14/15ರ ಸಂಜೆ ಸೂರ್ಯಕಿರಣವು ಅನೇಕ ಕಿಟಕಿಗಳ ಮೂಲಕ ಹಾಗೂ ನಂದಿಯ ಕೊಂಬಿನ ಮೂಲಕ ಹಾದು ಹೋಗಿ ಶಿವಲಿಂಗದ ಮೇಲೆ ಬೀಳುವುದು ಪ್ರಸಿದ್ಧ. ಆ ದೃಶ್ಯವನ್ನು ನೋಡಲು ಸಾವಿರಾರು ಜನರು ಸೇರುತ್ತಾರೆ.

ಹಿಂದಿನ ಚಿತ್ರವನ್ನು ಗಮನಿಸಿ. ಅಯನಗಳ ಆರಂಭದ ದಿನದಿಂದ 'x' ದಿನಗಳ ಹಿಂದೆ ಸೂರ್ಯನ ಹುಟ್ಟು, ಪ್ರತಿದಿನದ ಗತಿ, ಅಸ್ತ ಎಲ್ಲಾಗಿತ್ತೋ, ಆ ಆರಂಭದ ದಿನದಿಂದ 'x' ದಿನಗಳ ಅನಂತರವೂ ಅಲ್ಲೇ ಆಗುವುದು. ಉದಾಹರಣೆಗೆ, ಉತ್ತರಾಯಣದ ಆರಂಭದ ದಿನದಿಂದ (Dec 21/22), Nov 27/28 ದಿನಾಂಕವು ಸುಮಾರು 24 ದಿನ ಹಿಂದಿದೆ; Jan 14/15 ದಿನಾಂಕವು ಸುಮಾರು 24 ದಿನಗಳು ಮುಂದಿದೆ. ಅಂದರೆ ಈ ಎರಡು ದಿನಗಳಲ್ಲಿ ಸೂರ್ಯನ ಗತಿ ಒಂದೇ ಇರಬೇಕು. ಹಾಗಾದರೆ Jan



14/15ರಂದು ನಡೆಯುವ ಗವಿಗಂಗಾಧರೇಶ್ವರ ಗುಡಿಯ ಘಟನೆಯು Nov 27/28 ರಂದೂ ನಡೆಯಬೇಕಲ್ಲವೇ. ಆಶ್ಚರ್ಯವೆಂದರೆ Nov 27/28 ರ ಘಟನೆಯು ಅಲ್ಲಿಯ ಅರ್ಚಕರಿಗೇ ಅಪರಿಚಿತ! Jan 14/15ರ ನೂಕು ನುಗ್ಗಲು ಇಲ್ಲದಂತೆ, Nov 27/28ರಂದು ಆ ಘಟನೆಯನ್ನು ವಿರಾಮವಾಗಿ ನೋಡಿ ಆನಂದಿಸಬಹುದು.[1] ಈ ರೀತಿ ಸಮಾನಸೂರ್ಯಸಂಬಂಧಿಘಟನೆಗಳ ನಡುವಿನ ದಿನವಾಗಿರುವುದರಿಂದಲೂ Dec 21/22 ರಂದೇ ಉತ್ತರಾಯಣ ಪ್ರಾರಂಭವೆಂಬುದು ಸಂಶಯಾತೀತ.

ಹೀಗಿದ್ದರೂ ಕೆಲವರು ಉತ್ತರಾಯಣದ ಆಚರಣೆಯನ್ನು Jan 14/15 ರಿಂದ ಮಾಡುವುದಕ್ಕೆ ಕೆಳಗಿನ ಕಾರಣಗಳಿರಬಹುದೆಂಬುದು ನನ್ನ ಊಹೆ :-

೧. ಅಯನಗಳ ಆರಂಭದ ದಿನಗಳು ಸುಮಾರು ಶತಮಾನದಷ್ಟು ಕಾಲದಲ್ಲಿ ಬದಲಾವಣೆಯಾಗುತ್ತವೆ. ಇದನ್ನು Precession of equinoxes ಎಂದು ಕರೆಯುತ್ತಾರೆ. ಧ್ರುವನಕ್ಷತ್ರವು ಉತ್ತರದಿಂದ ವಿಚಲಿತಗೊಳ್ಳುವುದಕ್ಕೂ ಇದೇ ಕಾರಣ[2]. ಇದನ್ನು ಕಾಲಕ್ಕೆ ತಕ್ಕಂತೆ ಪರಿಗಣಿಸದಿರುವುದು.

೨. ವಿದೇಶೀಯ ಪಂಚಾಂಗಗಳಲ್ಲುಂಟಾದ, ಆಗಿರಬಹುದಾದ, ಆಗುತ್ತಿರುವ ದಿಢೀರ್ ಬದಲಾವಣೆಗಳು.

**ಉತ್ತರಾಯಣ ಹಾಗೂ ಸಂಕ್ರಾಂತಿಗಳನ್ನು Dec ತಿಂಗಳಲ್ಲೇ ಆಚರಿಸಿದ್ದು ಹತ್ತಾರು ಶತಮಾನದಷ್ಟು ಪ್ರಾಚೀನವಾದ ನೂರಾರು ಶಿಲಾಶಾಸನಗಳಿಂದ ತಿಳಿಯುತ್ತದೆ.**[3] ಇದನ್ನು ಮೇಲಿನ ಕಾರಣಗಳಿಂದ ಪರಿಮಾಣಾತ್ಮಕವಾಗಿಯೂ ವಿವರಿಸಲು ಸಾಧ್ಯ.

---

1. Jayanth Vyasanakere P. and Sudeesh K., Surya Majjana, *Resonance*, 2008, **13**, 768.

2. ಭೂಮಿಯು ಒಂದು ಪರಿಪೂರ್ಣ ಗೋಳವಲ್ಲ. ದೈನಂದಿನ ಸುತ್ತುವಿಕೆಯಿಂದ ತನ್ನ ಸಮಭಾಜಕವೃತ್ತದ (equator) ಬಳಿ ಹೆಚ್ಚಾಗಿ ಉಬ್ಬಿದೆ. ಆದ್ದರಿಂದ ಸೂರ್ಯಚಂದ್ರರ ಗುರುತ್ವಾಕರ್ಷಣೆಗೊಳಗಾಗಿ ಭೂಮಿಯ ದೈನಂದಿನ ಸುತ್ತಿನ ಕಕ್ಷೆಯು ಬುಗುರಿಯ ಕಕ್ಷೆಯಂತೆ ಓಲಾಡುತ್ತದೆ. ಅಂತಹ ಒಂದು ಪರಿಪೂರ್ಣ ಸುತ್ತಿಗೆ ಸುಮಾರು 26,000 ವರ್ಷ ಬೇಕು. ಅಂದರೆ, ಇಂದು ನಿಜವಾದ ಉತ್ತರವನ್ನು ಕೇವಲ $0.5^0$ ದೂರದಿಂದ ಸುತ್ತುತ್ತಿರುವ ಧ್ರುವ ನಕ್ಷತ್ರವು ಇನ್ನೂ 13,000 ವರ್ಷಗಳ ಅನಂತರ (ಹಾಗೂ ಮುಂಚೆ) $45^0$ ಯಷ್ಟು ದೊಡ್ಡಪ್ರಮಾಣದಲ್ಲಿ ಸುತ್ತುತ್ತದೆ. ಇದನ್ನು ನ್ಯೂಟನ್ ನಿಯಮಗಳನುಸಾರ ಕರಾರುವಾಕ್ಕಾಗಿ ಲೆಕ್ಕಹಾಕಬಹುದು ಹಾಗೂ ಪ್ರಾಯೋಗಿಕವಾಗಿ ಪರೀಕ್ಷಿಸಬಹುದು.

ಹಾಗಿದ್ದರೂ ಧ್ರುವನ ಧ್ರುವತ್ವಕ್ಕೆ - ಧ್ರುವ ಪದವಿಯು ಸಾಮಾನ್ಯ ಕಲ್ಪನೆಯಂತೆ ಕೇವಲ ನಕ್ಷತ್ರವಾಗಿರದೇ ತತ್ಕಾಲೀನ ಧ್ರುವ ದಿಕ್ಕಿಗೆ ಸಂಬಂಧಿಸಿರುವುದೋ ಅಥವಾ (ನಕ್ಷತ್ರವೇ ಎಂದು ಪಟ್ಟುಹಿಡಿಯುವುದಾದಲ್ಲಿ) ಧ್ರುವ ದಿಕ್ಕಿಗೆ ಸಮೀಪ ಬರುವ ಅನೇಕ ಪ್ರಮುಖ ನಕ್ಷತ್ರಗಳಲ್ಲೊಂದಾಗಿರುವುದೋ ಕಾರಣವಿರಬೇಕು. ಈ ಬಗ್ಗೆ ಹೆಚ್ಚಿನ ಚಿಂತನೆ ನಡೆಯಬೇಕು.

3. South-Indian Inscriptions, Archaeological Survey of India, 1986.

೩. ಉತ್ತರಾಯಣಕ್ಕೂ ಮಕರಸಂಕ್ರಮಣಕ್ಕೂ ನಂಟಿಲ್ಲ. ಉತ್ತರಾಯಣವು Dec 21/22 ರಂದು ಪ್ರಾರಂಭವಾದರೂ ಅದರ ಆಚರಣೆ ಮಾತ್ರ ತದನಂತರ ಬರುವ ಮೊದಲ ಸಂಕ್ರಮಣದಿಂದ ಎಂದಿರಬಹುದು. ಇದಕ್ಕೆ ಮೊದಲನೆಯದಾಗಿ, ಸೂಕ್ತಪ್ರಮಾಣ ಬೇಕು. ಎರಡನೆಯದಾಗಿ, ಮುಂದೊಂದು ದಿನ (ಕೆಲವು ಶತಮಾನಗಳ ಬಳಿಕ) ಉತ್ತರಾಯಣದ ಅನಂತರ ಬರುವ ಮೊದಲ ಸಂಕ್ರಮಣವು ಧನುಃಸಂಕ್ರಮಣವಾದರೆ ಅಂದಿನಿಂದಲೇ ಉತ್ತರಾಯಣಾಚರಣೆಯನ್ನು ನಾವೀಗ ಒಪ್ಪಬೇಕಾಗುತ್ತದೆ.

ಉತ್ತರಾಯಣ ಆರಂಭವಾಗುವುದು Dec 21/22 ರಂದು ಎಂಬುದರಲ್ಲಂತೂ ಸಂಶಯವಿಲ್ಲ. ಅದರ ಆಚರಣೆಯ ವಿಷಯದ ಬಗ್ಗೆ ಮಾತ್ರ ಹೆಚ್ಚಿನ ಜಿಜ್ಞಾಸೆ ನಡೆಯಬೇಕು. ಇಲ್ಲಿ ವ್ಯತ್ಯಾಸವಾದರೆ ವರ್ಷದಲ್ಲಿ ಸುಮಾರು 50 ದಿನಗಳು ಅಯನಗಳನ್ನು ತಪ್ಪು ಆಚರಿಸಿದಂತಾಗುವುದರಿಂದ ಈ ಬಗ್ಗೆ ಔದಾಸೀನ್ಯ ಸಲ್ಲದು.

**References**:


1. Smart, W.M., *Text Book on Astronomy*, Cambridge University press, 1962.

2. P.Jayanth Vyasanakere, K. Sudeesh and B.S. Shylaja, Astronomical significance of Gavi Gangadhareshwara temple in Bangalore, *Current Science*, 2008, **95, 11**, 1632.

3. B.S. Shylaja, The zodiacal pillars of Sringeri, *Current Science*, 2007, **92, 6**, 846.


* * * *

**ಶ್ರೀವ್ಯಾಸಮಧ್ವ ಮಾಸಪತ್ರಿಕೆಗೆ ಪೋಷಕರಾಗಿ**
**ಸಹಕರಿಸಿರುವ ಮಹನೀಯರು:**
**ಶ್ರೀ ಡಿ. ಆರ್. ಸತ್ಯನಾರಾಯಣ ರಾವ್,** ಬೆಂಗಳೂರು.



# ದ್ರೌಪದೀಸ್ವಯಂವರದ ಅಂತರಾರ್ಥ


– ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ


ದ್ರೌಪದೀಸ್ವಯಂವರದ ಘಟ್ಟ ಮಹಾಭಾರತದ ರಸಘಟ್ಟಗಳಲ್ಲೊಂದು.

ಜರಾಸಂಧ ಕರ್ಣಾದಿಗಳಿಗೆ ಧನುಸ್ಸಿನ ಹೆದೆಯೇರಿಸಲೂ ಸಹ ಸಾಧ್ಯವಾಗಲಿಲ್ಲ. ಅರ್ಜುನ ಭೀಮಸೇನನ ಅನುಜ್ಞೆಯಿಂದ, ಧನುಸ್ಸನ್ನು ಹೆದೆಯೇರಿಸಿದ; ಪಂಚಬಾಣಗಳನ್ನು ಹೂಡಿ ಮತ್ಸ್ಯಯಂತ್ರಕ್ಕೆ ಹೊಡೆದ. ಅದು ಕೆಳಕ್ಕೆ ಬಿತ್ತು. ಕೂಡಲೇ ದ್ರೌಪದೀದೇವಿ ಅವನ ಕೊರಳಲ್ಲಿ ಮಾಲೆ ಹಾಕಿದಳು ಎಂಬುದು ಅದರ ಸಂಗ್ರಹರೂಪ.

ಇದರಿಂದ ಸ್ಫುಟಪಡುವ ಅನೇಕವಿವರಗಳು ಹೀಗಿವೆ:

೧) ಭೀಮಸೇನ ಏಕೆ ಮತ್ಸ್ಯ ಯಂತ್ರ ಭೇದನ ಮಾಡಲಿಲ್ಲ ಎಂಬುದಕ್ಕೆ ಇಲ್ಲಿ ಉತ್ತರವಿದೆ. ಅರ್ಜುನ ತಾನೇ ಮಾಡುವುದಾಗಿ ಅನುಮತಿ ಬೇಡಿದುದರಿಂದ ಭೀಮ ಆ ಅವಕಾಶವನ್ನು ಅವನಿಗಿತ್ತ ಎಂದರ್ಥ. ಅದರಂತೆ ಪೂರ್ಣಪ್ರಜ್ಞನಾದ ಭೀಮನಿಗೆ ಆ ಧನುಸ್ಸಿಗೆ ವರವಿದ್ದ ವಿವರ, ಅರ್ಜುನನಿಗೆ ಶಿವನಿತ್ತ ಶಾಪದ ವಿವರ ಎಲ್ಲ ತಿಳಿದಿದ್ದುದು ಮತ್ತೊಂದು ಕಾರಣ ಎಂದು ತಿಳಿಯಬೇಕು. ಚಿಕ್ಕವರು ಮಾಡಿದ್ದನ್ನು ದೊಡ್ಡವನು ಮಾಡಬಲ್ಲ ಎಂಬ ಕೈಮುತ್ಯನ್ಯಾಯ ಇದಕ್ಕೆ ಮತ್ತೊಂದು ಕಾರಣ. '**ಶಿಷ್ಯಕೃತಂ ಗುರುಕೃತಂ ಭವತಿ**'. ಅಸಾಧಾರಣಖ್ಯಾತಿಗೆ ಕಾರಣವಾಗುವ ಆ ಮತ್ಸ್ಯಯಂತ್ರ ಭೇದನ ಕಾರ್ಯವನ್ನು ಅರ್ಜುನನಿಗೆ ಬಿಟ್ಟುಜಕೊಡುವ ಮೂಲಕ ಭೀಮಸೇನ ಮಾಡಿದ ತ್ಯಾಗ, ಅರ್ಜುನನ ಬಗ್ಗೆ ತೋರಿದ ಕರುಣೆ ಅನುಪಮ ಎಂಬುದನ್ನು ಗಮನಿಸಬೇಕು.

೨) ಭೀಮಸೇನ ಅರ್ಜುನನಂತೆ ಗಾಂಡೀವವನ್ನು ಸಹ ಉಪಯೋಗಿಸಬಲ್ಲ ಎಂಬ ಮಾತು ವನಪರ್ವದಲ್ಲಿ ದ್ರೌಪದಿಯ ಬಾಯಿಂದಲೇ ಬಂದಿದೆ.

**ತಥೈವ ದ್ರೌಪದೀವಾಕ್ಯಂ ವಾಸುದೇವಂ ಪ್ರತೀರಿತಮ್ ।**
**ಅಧಿಜ್ಯಮಪಿ ಯತ್ಕರ್ತುಂ ಶಕ್ಯತೇ ನೈವ ಗಾಂಡಿವಮ್ ।**
**ಅನ್ಯತ್ರ ಭೀಮಪಾರ್ಥಾಭ್ಯಾಂ ಭವತಶ್ಚ ಜನಾರ್ದನ ॥**

**– ಮ.ಭಾ.ತಾ.ನಿ. (೨/೧೭೬); ಭಾರತ (ವನ.)**

೩) ಬ್ರಹ್ಮಧನುಸ್ಸಾದ ಗಾಂಡೀವವನ್ನೇ ಎತ್ತಿ ಉಪಯೋಗಿಸಬಲ್ಲ ಭಾವಿಬ್ರಹ್ಮ ಭೀಮನಿಗೆ ಕೇವಲ ಶಿವವರವಿದ್ದ ಈ ಧನುಸ್ಸನ್ನು ಪೂರೈಸಿದ್ದು ಯಾವ ಲೆಕ್ಕ ಎಂಬುದನ್ನೂ ಗಮನಿಸಬೇಕು. ಶಿವನ ವರವನ್ನು ಭೀಮ ಮನ್ನಿಸಿದ್ದು ಅನುಗ್ರಹ ಬುದ್ಧಿಯಿಂದಲೇ ಹೊರತು ಅಸಾಮರ್ಥ್ಯದಿಂದಲ್ಲ. ಶಿವೋತ್ತಮನಾದ ಅವನಿಗೆ ಶಿವನ ವರ ಹೇಗೆ ಅಡ್ಡಿಯಾದೀತು ಎಂಬ ವಿವರ ಎರಡನೆಯ ಅಧ್ಯಾಯದಲ್ಲೇ ಬಂದಿದೆ.

೩) ಈ ದ್ರೌಪದಿಯ ಸ್ವಯಂವರದ ಘಟ್ಟ ಅಪೂರ್ವ ಅಧ್ಯಾತ್ಮವನ್ನು ಸಾರುವ ಮತ್ತೊಂದು ವಿಶೇಷ ಘಟ್ಟ. ಇಲ್ಲಿಯ ಧನುಸ್ಸು ಶಿವ ನೀಡಿದ್ದು, ಲಕ್ಷ್ಯ ಮತ್ಸ್ಯಯಂತ್ರ, ಅದನ್ನು ನೋಡಬೇಕಾದದ್ದು ಪಾತ್ರೆಯಲ್ಲಿನ ನೀರಿನಲ್ಲಿ, ಧನುಸ್ಸಿನಲ್ಲಿ ಹೂಡಬೇಕಾದದ್ದು ಪಂಚಬಾಣಗಳು, ಹೊಡೆಯಬೇಕಾದದ್ದು ಆ ಐದೂ ಬಾಣಗಳಿಂದ ಒಟ್ಟಾಗಿ. ಮತ್ಸ್ಯಯಂತ್ರ ಭೇದಿಸಿ ಬಿದ್ದಾಗ ಮಾತ್ರ ದ್ರೌಪದೀ ಸ್ವಯಂವರ. ಇಲ್ಲಿಯ ಮತ್ಸ್ಯಯಂತ್ರ ಮತ್ಸ್ಯಾದಿರೂಪನಾದ ಪರಬ್ರಹ್ಮನಾದ ಶ್ರೀಹರಿಯ ಸಂಕೇತ. ಪಾತ್ರೆಯಲ್ಲಿನ ನೀರು ಶಾಸ್ತ್ರದ ಸಂಕೇತ, ಮತ್ಸ್ಯದ ಪ್ರತಿಬಿಂಬವನ್ನು ಅದರಲ್ಲಿ ನೋಡುವುದು ಎಂದರೆ ಭಗವಂತನ ಮಹಿಮೆಯನ್ನು ಶಾಸ್ತ್ರದ ಮೂಲಕ ಕಾಣುವುದು ಎಂದರ್ಥ. ಧನುಸ್ಸು ಎಂದರೆ ಮನಸ್ಸು, ಐದು ಬಾಣಗಳು ಎಂದರೆ ಪಂಚಜ್ಞಾನೇಂದ್ರಿಯಗಳು. ಧನುಸ್ಸನ್ನು ಕಟ್ಟುವುದು ಎಂದರೆ ಮನಸ್ಸನ್ನು ನಿಗ್ರಹಿಸಿ ಹತೋಟಿಯಲ್ಲಿಟ್ಟುಕೊಳ್ಳುವುದು ಎಂದರ್ಥ. ಬಾಣಗಳನ್ನು ಧನುಸ್ಸಿನಲ್ಲಿ ಹೂಡುವುದು ಎಂದರೆ ಪಂಚ ಜ್ಞಾನೇಂದ್ರಿಯಗಳನ್ನು ಮನಃಪೂರ್ವಕವಾಗಿ ಲಕ್ಷ್ಯದಕಡೆಗೆ ತೊಡಗಿಸುವುದು ಎಂದರ್ಥ. ಹಾಗೆ ಧನುಸ್ಸಿನಲ್ಲಿ ಇಟ್ಟು ಐದು ಬಾಣಗಳಿಂದ ಮತ್ಸ್ಯಯಯಂತ್ರವನ್ನು ಹೊಡೆಯುವುದು ಎಂದರೆ ಪಂಚೇಂದ್ರಿಯಗಳನ್ನು ಶ್ರೀಹರಿಯತ್ತ ಕೇಂದ್ರೀಕರಿಸಿ ಚಿಂತಿಸುವುದು ಎಂದರ್ಥ (**'ಬ್ರಹ್ಮ ತಲ್ಲಕ್ಷ್ಯಮುಚ್ಯತೇ'**). ಹೊಡೆಯುವುದು ಎಂದರೆ ಚೆನ್ನಾಗಿ ಅರಿಯುವುದು ಎಂದರ್ಥ (**'ಭೇದನಂ ವಿಮರ್ಶಃ'** - ಗೀತಾಭಾಷ್ಯ). ಮತ್ಸ್ಯಯಂತ್ರ ಕೆಳಗೆ ಬೀಳುವುದು ಎಂದರೆ ಶ್ರೀಹರಿಯ ವ್ಯಾಪ್ತರೂಪವನ್ನು ಮನಸ್ಸಿನಲ್ಲಿ ತುಂಬಿಕೊಂಡು ಬಿಂಬರೂಪದ ಅವನನ್ನು ಧ್ಯಾನಿಸುವುದು ಎಂದರ್ಥ. ಹಾಗೆ ಮಾಡಿದಾಗ ದ್ರೌಪದಿ ಮಾಲೆ ಹಾಕುವಳು ಎಂದರೆ ಅಪರೋಕ್ಷಜ್ಞಾನ ಸಿದ್ಧಿಸುವುದು ಎಂದರ್ಥ.



೪) ಈ ಕಾರ್ಯ ಶಿಶುಪಾಲ ಮೊದಲಾದ ನಾಲ್ವರಿಗೂ ಆಗಲಿಲ್ಲ. ಅವರು ಧನುಸ್ಸನ್ನು ಹೆದೆಯೇರಿಸುವುದರಲ್ಲೇ ಸೋತುಹೋದವರು. ಎಂದರೆ ಮನೋನಿಗ್ರಹ ಸಾಧ್ಯವಾಗದೇ ವಿಫಲರಾದವರು. ಶಿಶುಪಾಲನಿಗೆ ಸಲ್ಲದ ಕಾಮ, ಶಲ್ಯನಿಗೆ ಸಲ್ಲದ ಬಲಪ್ರದರ್ಶನದ ಮೋಹ, ಜರಾಸಂಧನಿಗಂತೂ ಬಲುಬಗೆಯ ಮದ, ಕರ್ಣನಿಗೆ ದುರ್ಯೋಧನನ ವ್ಯಾಮೋಹ - ಆದ್ದರಿಂದ ಅವರಾರಿಗೂ ಧನುಸ್ಸನ್ನು ಪೂರ್ಣಮಾಡಲು ಸಾಧ್ಯವಾಗಲೇ ಇಲ್ಲ. ಬಳಿಕ ಬಂದಿದ್ದು ಭೀಮಾರ್ಜುನರು. ಭೀಮನಂತೂ ಸಾಕ್ಷಾತ್ ಭಾರತೀಪತಿಯೇ; ಅರ್ಜುನ ಮತ್ಸ್ಯಯಂತ್ರ ಭೇದನ ಮಾಡಿದ್ದು ಲೋಕಪ್ರಸಿದ್ಧ. ಅವನ ಯಶಸ್ಸಿಗೆ ಮೊದಲ ಕಾರಣ, ಅಣ್ಣನಾದ ವಾಯುದೇವರ ಅವತಾರನಾದ ಭೀಮನಿಂದ ಅನುಮತಿ ಪಡೆದದ್ದು, ಇದು **'ಶ್ರೀಗುರುಭ್ಯೋ ನಮಃ'** ಎನ್ನುವುದಕ್ಕೆ ಸಂಕೇತ. ಅನಂತರ ಭಗವಂತನಾದ ಕೃಷ್ಣನನ್ನು ನೋಡಿ ಭಕ್ತಿಯಿಂದ ಮನಸ್ಸಿನಲ್ಲೇ ವಂದಿಸಿದ್ದು, ಇದು **'ಹರಿಃ ಓಂ'** ಎನ್ನುವುದಕ್ಕೆ ಸಂಕೇತ. ಅಂತೂ ಹರಿವಾಯುಗಳ ಅನುಗ್ರಹ ಪಡೆದದ್ದು ಅವನ ಮೊದಲ ಅರ್ಹತೆ ಎಂದಾಯಿತು. ಬಳಿಕ ಅವನು ಧನುಸ್ಸನ್ನು ವಂದಿಸಿ ಅದನ್ನು ಕೈಗೆತ್ತಿಕೊಳ್ಳುವನು.

೫) ಇಲ್ಲಿ ಧನುಸ್ಸನ್ನು ವಂದಿಸುವುದು ಎಂದರೆ ಧನುಸ್ಸನ್ನು ನೀಡಿದ ಶಿವನನ್ನು ವಂದಿಸುವುದು. ಧನುಸ್ಸನ್ನು ನೀಡಿದ ಶಿವ ಮನಸ್ಸಿನ ಅಭಿಮಾನಿ ದೇವತೆಯೂ ಹೌದು. ಮನೋನಿಗ್ರಹ ಸಾಧ್ಯವಾಗುವುದು ಮನೋಭಿಮಾನಿ ದೇವತೆಯಾದ ಶಿವನಿಗೆ ಮಣಿದಾಗಲೇ ಎಂದರ್ಥ. ಬಳಿಕ ಅರ್ಜುನ ಪ್ರತಿಬಿಂಬವನ್ನು ನೋಡುತ್ತಾ ಧನುಸ್ಸಿನಲ್ಲಿ ಐದು ಬಾಣಗಳನ್ನು ಹೂಡಿದ್ದು ಶಾಸ್ತ್ರಾಧ್ಯಯನವನ್ನು ಮಾಡುತ್ತಾ ಪಂಚೇದ್ರಿಯಗಳನ್ನು ಭಗವಂತನ ಕಡೆಗೆ ಕೇಂದ್ರೀಕರಿಸಿದ್ದಕ್ಕೆ ಸಂಕೇತ. ಐದೂ ಬಾಣಗಳು ಒಟ್ಟಾಗಿ ಮತ್ಸ್ಯಯಂತ್ರಕ್ಕೆ ತಾಗಿದ್ದು ಧ್ಯಾನದ ಸಿದ್ಧಿಯ ಸಂಕೇತ. ಮತ್ಸ್ಯಯಂತ್ರ ಭೇದನವಾಗಿದ್ದು ಬಿಂಬರೂಪ ದರ್ಶನಕ್ಕೆ ಸೂಚಕ. ದ್ರೌಪದಿ ಮಾಲೆ ಹಾಕಿದ್ದು ಅರ್ಜುನನಿಗೆ ವಿದ್ಯಾಭಿಮಾನಿನಿಯಾದ ಸರಸ್ವತಿ ಒಲಿದು ಅಪರೋಕ್ಷಜ್ಞಾನವಾಗಿದ್ದಕ್ಕೆ ಸಂಕೇತ.

೬) ಹೀಗೆ ಇಡೀ ಪ್ರಸಂಗ ಅಪರೋಕ್ಷಜ್ಞಾನ ಸಾಧನೆಯ ಪರಿಯನ್ನು ಬಣ್ಣಿಸುವ ಅಧ್ಯಾತ್ಮದ ಸಾರಸರ್ವಸ್ವವಾಗಿದೆ. ಹೀಗೆ ಮೇಲ್ನೋಟಕ್ಕೆ ಕಾಣುವ ರೋಚಕ ಕಥೆ ಒಳನೋಟಕ್ಕೆ ಮೋಚಕವಾದ ತತ್ವಶಾಸ್ತ್ರವಾಗುವುದು ಶ್ರೀವ್ಯಾಸರ ಅದ್ಭುತವಾದ ರಚನಾಕೌಶಲಕ್ಕೆ ಹಿಡಿದ ಕನ್ನಡಿ.

೭) ಇಲ್ಲಿ ದ್ರೌಪದಿ ಮಾಲೆ ಹಾಕಿದ್ದು ಸರಸ್ವತಿ ಒಲಿಯುವುದಕ್ಕೆ ಸಂಕೇತ. ಅರ್ಜುನ ಇಂದ್ರಾವತಾರ, ಇಂದ್ರ ವಾಯುಭಾರತಿಯರ ನಾಲ್ವರು ಪುತ್ರರಲ್ಲಿ ಒಬ್ಬ. ಎಂದರೆ ಭೀಮ ಭಾರತೀಪತಿಯಾದರೆ, ಅರ್ಜುನ ಭಾರತೀಪುತ್ರ. ದ್ರೌಪದಿ ಅವನ ಕೊರಳಿಗೆ ಮಾಲೆ ಹಾಕಿದ್ದು ತಾಯಿ ಮಗನ ಕೊರಳಿಗೆ ಹಾಕಿದ ಮಾಲೆಯ ಸಂಕೇತ.

೮) ದ್ರೌಪದೀ ಅರ್ಜುನನ ಕೊರಳಲ್ಲಿ ಹಾಕಿದ ಮಾಲೆ ಶಿವ ಅಂಬೆಗೆ ನೀಡಿದ್ದ ವಿಶಿಷ್ಟವಾದ ಪುಷ್ಪಮಾಲೆ. ಅದನ್ನು ಧರಿಸಿದವನು ಭೀಷ್ಮರ ವಧೆಗೆ ಕಾರಣನಾಗುವನು ಎಂಬುದು ಶಿವ ನೀಡಿದ್ದ ವಚನ.

ಶ್ರೀಮದಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಅದರ ಅನೇಕಟೀಕೆಗಳಲ್ಲಿ ಈ ಪ್ರಸಂಗದ ವಿವರಗಳು ವಿಶ್ಲೇಷಿಸಲ್ಪಟ್ಟಿವೆ **(ಹೆಚ್ಚಿನ ವಿವೇಚನೆಗೆ ನಮ್ಮ ಪ್ರಕಾಶನದ 'ಮಹಾಭಾರತತಾತ್ಪರ್ಯನಿರ್ಣಯ' ಕೃತಿಯ ಅನುವಾದವನ್ನು ನೋಡಬಹುದು).**

*****


**ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)**

**ನಮ್ಮ ಪ್ರತಿಷ್ಠಾನದಿಂದ ಇತ್ತೀಚೆಗೆ ಬಿಡುಗಡೆಗೊಂಡ ಕೃತಿಗಳು:**

೧) **ರಾಮಾಮೃತಮಹಾರ್ಣವ** (ಸತ್ಯಾಭಿನವತೀರ್ಥರ ಕೃತಿ; ಅವರೇ ರಚಿಸಿರುವ ಸಂಸ್ಕೃತವ್ಯಾಖ್ಯಾನದೊಂದಿಗೆ); ಪ್ರಥಮಾವೃತ್ತಿ ರೂ. ೨೦೦/-

೨) **ಶ್ರೀಹರಿಭಜನಕಲ್ಪದ್ರುಮ** (ತಾರತಮ್ಯಕ್ರಮದಲ್ಲಿ ಶ್ರೀಹರಿಗುರುಗಳ ಭಜನಪದ್ಧತಿ); ದ್ವಿತೀಯಾವೃತ್ತಿ (ದ್ವಿತೀಯಮುದ್ರಣ) ರೂ. ೬೦/-

೩) **ಕೃಷ್ಣಾಮೃತಮಹಾರ್ಣವ** (ಸಂಸ್ಕೃತಮೂಲ, ಕನ್ನಡ ಅನುವಾದ, ವಿವರಣೆ ಹಾಗೂ ಟಿಪ್ಪಣಿಗಳಲ್ಲಿನ ವಿಶೇಷಾಂಶಗಳೊಂದಿಗೆ) ದ್ವಿತೀಯಾವೃತ್ತಿ; ರೂ. ೬೦/-

೪) **ಮಹಾಭಾರತದ ಬೆಳಕು**; ರೂ. ೪೦/-




# ಭಗವದ್ಗೀತೆಯ ವೈಶಿಷ್ಟ್ಯ

## (೨೮.೧೧.೦೯ - ಗೀತಾಜಯಂತೀ ನಿಮಿತ್ತ ಲೇಖನ)


**- ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ**


ಭಗವದ್ಗೀತೆ ವಿಶ್ವಮಾನ್ಯವಾದ ಮಹೋನ್ನತ ಕೃತಿ. ಅದನ್ನು ಹೇಳಿದವನು ಭಗವಂತನಾದ ಶ್ರೀಕೃಷ್ಣ; ಕೇಳಿದವನು ಪರಮಭಗವದ್ಭಕ್ತನಾದ ಅರ್ಜುನ. ಅದರಲ್ಲಿನ ವಿಷಯವಂತು ಭಗವಂತನ ವಿಚಾರವೇ. ಅದರ ಮಾನ್ಯತೆಯ ರಹಸ್ಯ ಅಡಗಿರುವುದೇ ಇದರಲ್ಲಿ. ಶಬ್ದದಲ್ಲಿ ವಾಮನ; ಅರ್ಥದಲ್ಲಿ ತ್ರಿವಿಕ್ರಮ. ಇದು ಅದರ ಮತ್ತೊಂದು ಹಿರಿಮೆ. ವಿಶ್ವದ ಬೇರಾವ ಗ್ರಂಥಕ್ಕೂ ಇರದ ಮಹಿಮೆ ಇದರದು.

ಇದನ್ನು ಉಪದೇಶಿಸಿದ ಸನ್ನಿವೇಶವೂ ವಿಚಿತ್ರವಾದುದು, ವಿಶಿಷ್ಟವಾದುದು; ಋಷಿಮುನಿಗಳು ಅಧ್ಯಯನ ಮಾಡುವ ಇದರ ರಚನೆಯ ರಂಗಸ್ಥಳ ನಿರ್ಮಲವಾದ ತಪೋಭೂಮಿಯಲ್ಲ; ಭಯಾನಕವಾದ ರಣಭೂಮಿ. ಸುತ್ತಲೂ ಇದ್ದದ್ದು ಮರಗಿಡಗಳಲ್ಲ, ಸಾಧುಪ್ರಾಣಿಗಳಲ್ಲ; ಚಿತ್ರವಿಚಿತ್ರ ಸಾಮರ್ಥ್ಯದ ಯೋಧರು. ಅವರ ಕೈಯಲ್ಲಿ ಆ ಮುನ್ನ ಜಗತ್ತು ಕಂಡರಿಯದ ಬಗೆ ಬಗೆಯ ಶಸ್ತ್ರಾಸ್ತ್ರಗಳು. ನೆರೆದಿದ್ದವರು ಶತ್ರುಗಳಲ್ಲ, ಬಂಧುಗಳು; ಆದರೆ ಅವರಂತಹ ಶತ್ರುಗಳನ್ನೇ ಜಗತ್ತು ಬೇರೆಂದೂ ಕಾಣಲಿಲ್ಲ. ನೆರೆದಿದ್ದ ಸೇನೆಯ ಸಂಖ್ಯೆಯಂತೂ ಹದಿನೆಂಟು ಅಕ್ಷೋಹಿಣಿಯಷ್ಟು ಅಪಾರ. ಆ ಕುರು-ಪಾಂಡವರು ಒಂದೇ ವಂಶದ ಕುಡಿಗಳು. ಪ್ರಶಾಂತಿಗೆ ಹೆಸರಾದ ಚಂದ್ರನ ವಂಶ ಅವರದು; ಆದರೆ ಕಂಡರಿಯದ ಅಶಾಂತಿ ಅಲ್ಲಿ ತುಂಬಿತ್ತು. ಕೌರವರಿಗೆ ರಾಜ್ಯಲಕ್ಷ್ಮಿಯ ಬಯಕೆ; ಪಾಂಡವರಿಗೆ ಲಕ್ಷ್ಮೀಪತಿಯಾದ ಶ್ರೀಕೃಷ್ಣನನ್ನು ಒಲಿಸುವ ಹಂಬಲ. ಆ ಕುರುಕ್ಷೇತ್ರವೂ ಅಂತಹುದೇ. ಅದೇ ವಂಶದ ಪ್ರಖ್ಯಾತನಾದ ಕುರುವೆಂಬ ರಾಜ ನಿರ್ಮಿಸಿದ್ದ ರಣಾಂಗಣ. ಅದರಿಂದಾಗಿಯೇ ಅದರ ಹೆಸರು ಕುರುಕ್ಷೇತ್ರ. ಧರ್ಮಕ್ಕೆ ಜಯವಾಗಬೇಕೆಂಬ ಹಂಬಲ ಆ ರಾಜನಿಗೆ ಆ ಕ್ಷೇತ್ರದ ನಿರ್ಮಾಣದ ಹಿನ್ನೆಲೆಯಲ್ಲಿತ್ತು. ಒಂದೇ ವಂಶದ ಜನ ಅದೇ ವಂಶದ ರಾಜ ನಿರ್ಮಿಸಿದ್ದ ರಣಭೂಮಿಯಲ್ಲಿ ಒಂದೆಡೆ ಸೇರಿ ಕಾದಲು ಸರ್ವಸನ್ನದ್ಧರಾಗಿದ್ದರು. ಆ ಸಮರದ ವಿವರ ಕೇಳಲು ಕೌರವರ ತಂದೆ ಧೃತರಾಷ್ಟ್ರ ಕಾತರದಿಂದ ಕುಳಿತಿದ್ದ. ಅದನ್ನು ಅವನಿಗೆ ತಿಳಿಸಲು ಕುರುಪಾಂಡವರ ತಾತ ವೇದವ್ಯಾಸರು ದಿವ್ಯದೃಷ್ಟಿಯನ್ನು ನೀಡಿ, ತಮ್ಮ ಶಿಷ್ಯನಾದ ಸಂಜಯನನ್ನು ಅಣಿ ಮಾಡಿದ್ದರು.

ವೇದವ್ಯಾಸರು ಆ ವಂಶದ ತಾತನಾದರೂ, ಇಡೀ ಜಗತ್ತಿಗೆ ಮುತ್ತಾತನಾದ ಪರಬ್ರಹ್ಮ.

ವೇದವ್ಯಾಸರದು ವಿಚಿತ್ರವ್ಯಕ್ತಿತ್ವ. ಸಂಜಯನಿಗೆ ಕಣ್ಣು ನೀಡಿದರು; ಯುದ್ಧದ ವಾರ್ತೆಯನ್ನು ಧೃತರಾಷ್ಟ್ರನ ಕಿವಿಗೆ ಬೀಳಿಸಿದರು; ಅದನ್ನು ಅನಂತರದ ಜನ ತಿಳಿಯಲೆಂದು ಅದರ ವಿವರಗಳನ್ನು ತಾವೇ ಬರೆದರು. ಜನ ನಿರ್ವಿಘ್ನವಾಗಿ ಕೇಳಲು ಸಾಧ್ಯವಾಗಲಿ ಎಂದು ವಿನಘೇಶನಾದ ಗಣೇಶನಿಂದಲೇ ಆ ಯುದ್ಧದ ಪೂರ್ವಾಪರಗಳ ಸಮೇತ ಬರೆಸಿದರು. ಅದೇ ಜಗತ್ತಿನ ಸಾರಸ್ವತಪ್ರಪಂಚದ ಅಚ್ಚರಿಯ ಮೇರು ಎನ್ನಿಸಿದ 'ಮಹಾಭಾರತ'. ಅದು ವಸ್ತುವಾಗಿ ಇತಿಹಾಸ; ಅದ್ಭುತ ನಿರೂಪಣೆಯಿಂದಾಗಿ ಮಹಾಕಾವ್ಯ. ನೀಡುವ ಅಮರಸಂದೇಶದಿಂದಾಗಿ ಅಜರಾಮರವಾದ ತತ್ತ್ವಶಾಸ್ತ್ರ. ಜೊತೆಗೆ ನೀತಿಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮೊದಲಾಗಿ ಸಕಲಶಾಸ್ತ್ರಗಳ ಸಾರಸರ್ವಸ್ವ. ಅದಕ್ಕೆಂದೇ ಅದು ವಿಶ್ವಕಂಡ ಅನುಪಮ ವಿಶ್ವಕೋಶ. ಎಂದೂ ತತ್ತ್ವಜಿಜ್ಞಾಸುಗಳ ಬಾಳಿಗೆ ಬೆಳಕು ಬೀರುವ ಪ್ರಮೇಯರತ್ನಕೋಶ. ಇಂತಹ ಮಹಾಭಾರತದ ಹದಿನೆಂಟು ಪರ್ವಗಳಲ್ಲಿ ಭೀಷ್ಮಪರ್ವ ಆರನೆಯ ಪರ್ವ. ಅದರ ಮುಂಚಿನ ಐದು ಪರ್ವಗಳು ಆದಿಪಂಚಕ. ದ್ರೋಣಪರ್ವ, ಕರ್ಣಪರ್ವ, ಶಲ್ಯಪರ್ವ ಮತ್ತು ಸೌಪ್ತಿಕಪರ್ವಗಳು ಮುಂದಿನ ನಾಲ್ಕು ಯುದ್ಧಪರ್ವಗಳು. ಸ್ತ್ರೀಪರ್ವ, ಶಾಂತಿಪರ್ವ, ಅನುಶಾಸನಪರ್ವ, ಆಶ್ವ-ಮೇಧಿಕಪರ್ವ, ಆಶ್ರಮವಾಸಿಕಪರ್ವ, ಮೌಸಲಪರ್ವ, ಮಹಾಪ್ರಸ್ಥಾನಪರ್ವ ಹಾಗೂ ಸ್ವರ್ಗಾರೋಹಣಪರ್ವಗಳು ಯುದ್ಧೋತ್ತರವಿಷಯಗಳ ನಿರೂಪಣೆಗಾಗಿ ಮೀಸಲಾದ ಎಂಟು ಪರ್ವಗಳು.

ಭೀಷ್ಮಪರ್ವದಲ್ಲಿ ಭಗವಂತನ ಬಾಯಿಂದ ಹೊರಹೊಮ್ಮಿದ ಉಪದೇಶಾಮೃತ ಭಗವದ್ಗೀತೆ. ಸಮರದ ಮುನ್ನ ಅದರ ಆವಶ್ಯಕತೆಯನ್ನು ಸಾರುವ ಅಪೂರ್ವಭಾಗ. ಇನ್ನೇನು ಯುದ್ಧ ಪ್ರಾರಂಭವಾಗಬೇಕು ಎನ್ನುವ ಸಮಯದಲ್ಲಿ ಉಭಯಪಕ್ಷದ ಯೋಧರನ್ನು ಕಾಣುವ ವಿಚಿತ್ರಬಯಕೆ ಅರ್ಜುನನಿಗೆ. ಅದನ್ನು ಪೂರೈಸಲೆಂದು ಪುರುಷೋತ್ತಮನಿಂದ ಎರಡು ಸೇನೆಗಳ ಮಧ್ಯೆ ಅವನ ರಥದ ಸ್ಥಾಪನೆ. ಉಭಯಪಕ್ಷಗಳಲ್ಲಿ ನೆರೆದಿದ್ದ ಕಾದಲು ಸಜ್ಜಾಗಿ ನಿಂತಿದ್ದ ಬಂಧುಸಮೂಹವನ್ನು ಕಾಣುತ್ತಲೇ ಸಲ್ಲದ ಕರುಣೆಗೆ ಒಳಗಾಗಿ ಅರ್ಜುನನ ವಿಷಾದ. ಅದರ ಪರಿಹಾರಕ್ಕಾಗಿ ಅವನು ಶ್ರೀಕೃಷ್ಣನನ್ನೇ ಮೊರೆಹೋಗುವ ವಿವೇಕ ತೋರಿದ. ಅದರ ಫಲವಾಗಿ



ಭಗವಂತನಿಂದ ಹರಿದ ಉಪದೇಶಧಾರೆ ಮನುಕುಲದ ಅಜ್ಞಾನದ ಕೊಳೆಯನ್ನು ತೊಳೆಯುವ ಗಂಗಾಧಾರೆಯಾಯಿತು. ಅದನ್ನು ಕೇಳುತ್ತಿದ್ದಂತೆಯೇ ಅರ್ಜುನನ ದುಗುಡ ಕಳೆಯಿತು; ಜ್ಞಾನದ ಕಣ್ಣು ತೆರೆಯಿತು. ತತ್ತ್ವ ಕೇಳಿದ ಅವನು ಭಗವಂತನ ದಯೆಯಿಂದ ಅವನ ವಿಶ್ವರೂಪವನ್ನು ಕಣ್ಣಾರೆ ಕಂಡ. ಸಾಧನೆಯ ಸಾರಸರ್ವಸ್ವವನ್ನೂ ಮನಗಂಡ. ಅವನ ಆದೇಶದಂತೆ ತೊರೆದಿದ್ದ ಬಿಲ್ಲು ಬಾಣಗಳನ್ನು ಮತ್ತೆ ಕೈಗೆತ್ತಿಕೊಂಡ. ಶತ್ರುನಾಶಕ್ಕೆ ಬದ್ಧಕಂಕಣನಾಗಿ ನಿಂತುಕೊಂಡ. ಅಂತೂ ಕರ್ತವ್ಯವಿಮುಖನಾಗಿದ್ದ ಅರ್ಜುನ ಕರ್ತವ್ಯ-ಸುಮುಖನಾದ. ಕೆಲವೇ ನಿಮಿಷಗಳ ಅವಧಿಯಲ್ಲಿ ಮರೆಯಾಗಿದ್ದ ಜ್ಞಾನವನ್ನು ಮತ್ತೆ ಬೆಳಗಿದ ಕೃತಿ ಭಗವದ್ಗೀತೆ. ಭಗವಂತನ ಮಾತಿನ ಮಾಂತ್ರಿಕಶಕ್ತಿ ಅಂತಹುದು. ಅದಕ್ಕೆಂದೇ ಅದಕ್ಕೆ ಸರ್ವಮಾನ್ಯತೆ. ಅದನ್ನು ಓದುವ ಜನರು ಮತ್ತೆ ಕರ್ತವ್ಯಪರಾಯಣರಾಗುವುದರಲ್ಲಿ ಎರಡು ಮಾತಿಲ್ಲ. ಅದಕ್ಕೆಂದೇ ಅದು ನಿತ್ಯಪಠ್ಯಗ್ರಂಥ. ಅದು ಉಪದೇಶಗೊಂಡ ಪರಿಸರವೂ ಅಂತಹುದೇ. ಹೆಸರಿಗೆ ರಣಾಂಗಣವಾದರೂ, ಅದು ಧರ್ಮಕ್ಷೇತ್ರವಾದ ಕುರುಕ್ಷೇತ್ರ. ಅರ್ಜುನ ಕುಳಿತಿದ್ದ ರಥವಂತೂ ಸ್ವತಃ ಶ್ರೀರಾಮ ಏರಿ ಕುಳಿತು ರಾವಣನನ್ನು ಸಂಹರಿಸಿದ್ದ ಪವಿತ್ರರಥ. ಅದನ್ನು ಸ್ವತಃ ರಾಮನಿಗೆ ಅರ್ಪಿಸಿ, ಪೂಜಿಸಿದ್ದು ಸ್ವರ್ಗಾಧಿಪತಿಯಾದ ದೇವೇಂದ್ರ. ಈಗ ಅದರಲ್ಲಿ ಕುಳಿತು ಕೇಳುತ್ತಿರುವ ಅರ್ಜುನ ಆ ದೇವೇಂದ್ರನ ಅವತಾರನೇ. ಅಂದು ಅವನು ತನಗೆ ಅರ್ಪಿಸಿದ್ದ ರಥಕ್ಕೆ ಇಂದು ಸಾರಥಿಯಾಗಿ ಕುಳಿತು ಮುನ್ನಡೆಸ ಬಂದವನು ಆ ಶ್ರೀರಾಮನೇ ಆದ ಶ್ರೀಕೃಷ್ಣ. ದೇಹವೇ ರಥ ಎಂದಿದೆ ಕಠೋಪನಿಷತ್ತು. ದೇಹವನ್ನು ಭಗವಂತನಿಗೆ ಒಪ್ಪಿಸಿದಾಗ, ಅದನ್ನು ಸದ್ಗತಿಯತ್ತ ಮುನ್ನಡೆಸಲು ಸ್ವತಃ ಭಗವಂತನೇ ಸಾರಥಿಯಾಗಿ ಕೂಡುವನು ಎಂಬುದು ಇದರ ಮರ್ಮ. ರಥದ ಮೇಲೆ ಜಯರೂಪದ ಹನುಮಂತ; ಅವನಂತೂ ಶ್ರೀರಾಮಭಕ್ತಾಗ್ರೇಸರ. ಪಕ್ಕದಲ್ಲಿ ಹನುಮಂತನ ಮತ್ತೊಂದು ರೂಪವಾದ ಭೀಮಸೇನ ಕೃಷ್ಣಭಕ್ತಾಗ್ರೇಸರ. ರಥದ ಕುದುರೆಗಳು ಅಚ್ಚ ಬಿಳಿ ಬಣ್ಣದವುಗಳು ಶುದ್ಧತೆಯ ಸಂಕೇತ. ಕೈಯಲ್ಲಿ ಗಾಂಡೀವ; ಅದು ಬ್ರಹ್ಮ ಹಿಡಿದ ಧನುಸ್ಸು. ಅದಕ್ಕೆ ಅಕ್ಷಯಬತ್ತಳಿಕೆಗಳು. ಅರ್ಜುನನೊಳಗೆ ನರನೆಂಬ ಶೇಷನ ಆವೇಶ ಬೇರೆ. ಅದಕ್ಕೆಂದು ಅವನ ರಥ ನಡೆಸುತ್ತಲೇ ಕೃಷ್ಣ ಅವನ ಮನೋರಥ ಪೂರೈಸಿದ. ಆದ್ದರಿಂದಲೇ ಅವನು ನಾರಾಯಣನಾದ ಕೃಷ್ಣನಿಂದ ಕೇಳಿದ ಗೀತೆ ಸಮಸ್ತನರರಿಗೂ ಶಾಸ್ತ್ರಸಂದೇಶವಾಯಿತು.

*****

# ಭಾವಬೋಧದ ಉಲ್ಲೇಖ ಭಾವದೀಪದಲ್ಲಿ

– ತ್ರಿವೇದಿ ಉಂಡಾರು ಶ್ರೀನಿವಾಸಮೂರ್ತಿ ಆಚಾರ್ಯ

ಶ್ರೀರಾಘವೇಂದ್ರ ಶ್ರೀಪಾದರು ತಮ್ಮ ಟಿಪ್ಪಣಿಗಳಲ್ಲಿ ಇತರರ ಗ್ರಂಥಗಳನ್ನುಲ್ಲೇಖಿಸುವುದು ಕಂಡು ಬರುತ್ತದೆ. ಅದನ್ನು ಸಾಮಾನ್ಯವಾಗಿ ''ಇತ್ಯಾಹುಃ'' ''ಹೀಗೆ ಹೇಳುತ್ತಾರೆ'' ಎಂಬ ಪದಗಳಿಂದ ತೋರಿಸುವುದು ಕಂಡಿದೆ. ಇಂತಹ ಅಪೂರ್ವ ಸಂಗ್ರಹ ತತ್ತ್ವಪ್ರಕಾಶಿಕಾಭಾವದೀಪದ ಆಳವಾದ ಅಧ್ಯಯನ ನಡೆಸಿದವರಿಗೆ ತಿಳಿಯುತ್ತದೆ. ಅದರೆಡೆ ಒಂದು ನೋಟ.

'ಓಂ ನ ಸಾಮಾನ್ಯಾದಪ್ಯುಪಲಬ್ಧೇರ್ಮೃತ್ಯುವನ್ನ ಹಿ ಲೋಕಾಪತ್ತಿಃ ಓಂ' (೩-೩-೫೩). ಇದು ನಸಾಮಾನ್ಯಾಧಿಕರಣದ ಬ್ರಹ್ಮಸೂತ್ರ. ಇಲ್ಲಿ ''ಕಿಂ ನಾಮ ಸ್ವಬಿಂಬದರ್ಶನಾದೇವ'' ಎಂಬುದು ಟೀಕಾಪ್ರತೀಕ. ಇದಕ್ಕೆ ಅರ್ಥ ವಿವರಿಸುತ್ತ ಭಾವದೀಪದಲ್ಲಿ ರಾಯರ ಮಾತು ಹೀಗೆ ಹೊರಟಿದೆ:

''ಕೇಚಿತ್ತು ಬಿಂಬಶಬ್ದೋ ಹೃದಿಸ್ಥಪರ ಏವ । ಅವತಾರಾದಿದರ್ಶಿನಾಮಪಿ ಹೃದಿಸ್ಥದರ್ಶನಮಾವಶ್ಯಕಮ್ । ಯೇಷಾಂ ಬಹಿರುಪಾಸನೇನ ಮೋಕ್ಷಃ ತೇಷಾಂ ಹೃದ್ಯುಪಾಸನಂ ಕಿಂಚಿತ್ಕರ್ತವ್ಯಮೇವೇತಿ ತೃತೀಯಾಧ್ಯಾಯ-ಬೃಹದ್ಭಾಷ್ಯೋಕ್ತೇಃ ಅತೋ ನ ದೃಷ್ಟ್ವೈವೇತ್ಯುಕ್ತಿ ವಿರೋಧ ಇತ್ಯಾಹುಃ ॥''

ಕೆಲವರು ಹೀಗೆ ಅಭಿಪ್ರಾಯ ಪಡುತ್ತಾರೆ: ''ಟೀಕಾರಾಯರು ಹೇಳಿರುವ 'ಬಿಂಬ' ಶಬ್ದವು ''ಹೃದಯದಲ್ಲಿರುವ'' ಎಂಬರ್ಥದ ಪರವಾಗಿಯೇ ಇದೆ. ಅವತಾರ ಮೊದಲಾದುದನ್ನು ನೋಡುವವರಿಗೂ, ಹೃದಯದಲ್ಲಿರುವ ಹರಿಯ ದರ್ಶನವು ಅವಶ್ಯಕವು. ಯಾರಿಗೆ ಹೊರಗಡೆ ಉಪಾಸನೆ ಮಾಡುವುದರಿಂದ ಮೋಕ್ಷವಿದೆ, ಅವರೂ ಹೃದಯದಲ್ಲಿರುವ ಹರಿಯ ಉಪಾಸನೆ ಸ್ವಲ್ಪ ಮಾಡಲೇಬೇಕು. ಏಕೆಂದರೆ ಮೂರನೇ ಅಧ್ಯಾಯ ಬೃಹದ್ಭಾಷ್ಯದಲ್ಲಿ ಹೀಗೆ ಹೇಳಿದ್ದರಿಂದ. ಆದ್ದರಿಂದಲೇ ದೃಷ್ಟ್ವೈವ = ನೋಡಿಯೇ ಎಂದದ್ದು'' ಹೀಗೆ ಕೆಲವರು ಹೇಳುತ್ತಾರೆ.

ಕೆಲವರು ಎಂದರೆ ಯಾರೆಂಬ ಪ್ರಶ್ನೆ ಬರುತ್ತದೆ. ರಾಯರ ಹಿಂದಿನ ಕಾಲದವರೋ ಅಥವಾ ಸಮಕಾಲೀನರೋ ಆಗಿರಬೇಕು. ಈ ವಾಕ್ಯವು ಉತ್ತರಾದಿಮಠದ ಶ್ರೀರಘೂತ್ತಮತೀರ್ಥರ ಭಾವಬೋಧದಲ್ಲಿದೆ:



''ಯೇಷಾಂ ಬಹಿರುಪಾಸನೇನ ಮೋಕ್ಷಃ ತೇಷಾಂ ಹೃದ್ಯುಪಾಸನಂ ಕಿಂಚಿತ್ ಕರ್ತವ್ಯಮೇವೇತಿ ...'' ಎಂದು ಅವರ ವಾಕ್ಯ. ರಾಘವೇಂದ್ರರು ಅವರ ವಾಕ್ಯವನ್ನು ತಮ್ಮ ಮಾತಿನಲ್ಲಿ ಅನುವಾದಿಸಿದ್ದಾರೆ.

ಮಧ್ವಮತದಲ್ಲಿ ಅಪೂರ್ವಾಂಶವಿದ್ದು, ಅದು ಗ್ರಾಹ್ಯವಿದ್ದರೆ ಅದನ್ನೆಲ್ಲ ಸಜ್ಜನರೂ ಗ್ರಹಿಸಬೇಕು. ಇದರಲ್ಲಿ ಸಂಶಯವಿಲ್ಲ.

ರಾಯರೂ ಇದನ್ನೇ ಮಾಡಿದ್ದಾರೆ. ತಮಗಿಂತ ಹಿಂದಿನ ಟಿಪ್ಪಣಿಕಾರರಾದ ರಘೂತ್ತಮರ ಗ್ರಂಥವನ್ನು ಉಲ್ಲೇಖಿಸಿ, ಅವರ ಅಭಿಪ್ರಾಯ ಹೀಗಿದೆ ಎಂದಿದ್ದಾರೆ. ಮತಭೇದವಿಲ್ಲದೆ, ಹರಿಸರ್ವೋತ್ತಮತ್ವ ವಾಯು ಜೀವೋತ್ತಮತ್ವ ಮೊದಲಾದ ತತ್ತ್ವಗಳಿಗೆ ಬದ್ಧರಾಗಿದ್ದ ರಾಘವೇಂದ್ರರು ಇತರ ಟಿಪ್ಪಣಿಕಾರರ ಅಭಿಪ್ರಾಯವನ್ನು ತಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ಉಲ್ಲೇಖಿಸಿರುವುದು ಅವರ ದೊಡ್ಡ ಗುಣವೇ ಸರಿ.

**ರಾಘವೇಂದ್ರಗುರುಂ ವಂದೇ ರಾಮಪಾದಾಬ್ಜಮಾನಸಮ್ ।**
**ಕಾಮಿತಾಶೇಷಕಲ್ಯಾಣಪ್ರದಂ ಸನ್ಮಾರ್ಗದರ್ಶಕಮ್ ॥**

*****

## ಅಂತರ್ಜಾಲದ ಮೂಲಕ ನೇರವಾಗಿ ಭಾಗವತದ ಪಾಠ

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರು ಕಳೆದ ಒಂದು ವರ್ಷದಿಂದ ಪ್ರತಿನಿತ್ಯ ಬೆಳಿಗ್ಗೆ ೮.೦೦ ರಿಂದ ೯.೩೦ರವರೆಗೆ ಶ್ರೀಮದ್ಭಾಗವತದ ಪಾಠವನ್ನು 'ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ'ದ ಸಭಾಂಗಣದಲ್ಲಿ ನಡೆಸಿ-ಕೊಡುತ್ತಿರುವರು. ಪರಮಪೂಜ್ಯ ಶ್ರೀಪಲಿಮಾರು ಮಠಾಧೀಶರಾದ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರ ಅನುಗ್ರಹದಿಂದ ಜಿಜ್ಞಾಸುಗಳ ಅನುಕೂಲಕ್ಕಾಗಿ ಈಗ ಅಂತರ್ಜಾಲದ ಮೂಲಕ ಪಾಠವನ್ನು ನೇರಪ್ರಸಾರ ಮಾಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಆಸಕ್ತರು ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ಅಂತರ್ಜಾಲದ ವಿಳಾಸ: www.livepravachana.com

ಸಮಯ: ಬೆಳಿಗ್ಗೆ ೮.೦೦ ರಿಂದ ೯.೩೦ ಘಂಟೆವರೆಗೆ

# ಶ್ರೀಕನಕದಾಸರ ವ್ಯಕ್ತಿತ್ವ

## (ಶ್ರೀಕನಕದಾಸರ ಜಯಂತೀ ನಿಮಿತ್ತ ಲೇಖನ)

**ಲೇಖಕರು : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ**

ಶ್ರೀಕನಕದಾಸರು ಕರ್ನಾಟಕದ ಪ್ರಮುಖ ಹರಿದಾಸರಲ್ಲಿ ಒಬ್ಬರು. ಜ್ಞಾನ ಯೋಗಿಗಳಲ್ಲಿ ಸನಕಮುನಿಯಂತೆ, ಕರ್ಮಯೋಗಿಗಳಲ್ಲಿ ಜನಕರಾಜನಂತೆ ಹರಿದಾಸರಲ್ಲಿ ಕನಕದಾಸರು ಅನೇಕ ಕಾರಣಗಳಿಂದ ಗಮನಾರ್ಹರೆನ್ನಿಸಿ-ಕೊಂಡಿದ್ದಾರೆ.

ಚಾತುರ್ವರ್ಣ್ಯಪದ್ಧತಿಯ ಚೌಕಟ್ಟಿನಲ್ಲಿ ಶೂದ್ರವರ್ಗದ ಒಂದು ಒಳಪಂಗಡಕ್ಕೆ ಸೇರಿದವರಾದ ಇವರ ಸಾಧನೆ ವೈದಿಕಪ್ರಪಂಚದಲ್ಲಿ ಮಾನ್ಯತೆ ಗಳಿಸಿದ್ದು ಇತಿಹಾಸ. ಕಾಗಿನೆಲೆ, ಬಾಡ, ವಿಜಯನಗರ, ತಿರುಪತಿ ಮತ್ತು ಉಡುಪಿ ಇವರ ಪ್ರಮುಖ ಕಾರ್ಯಕ್ಷೇತ್ರಗಳು.

ಕನಕದಾಸರ ಪೂರ್ವಜೀವನ ಪ್ರಚಲಿತ ಕಥೆಯಂತೆ ಒಂದು ಕಾಲದಲ್ಲಿ ಧನ ಕನಕಾದಿಗಳಿಂದ ತುಂಬಿತ್ತು. ಒಂದರ್ಥದಲ್ಲಿ ಅವುಗಳಿಗೆ ದಾಸರೇ ಆಗಿಬಿಟ್ಟಿದ್ದ ಅವರು ಸ್ವತಃ ಭಗವಂತನೇ ತನ್ನ ದಾಸನಾಗಲು ಕರೆಯಿತ್ತಾಗಲೂ ಮೊದಲು ಅಷ್ಟಾಗಿ ಗಮನಿಸಲಿಲ್ಲವಂತೆ. ಕೊನೆಗೂ ಒಂದು ಹಂತದಲ್ಲಿ ಭಗವಂತನ ಕರೆ ಅವರ ಹೃದಯವನ್ನು ಮುಟ್ಟಿತು. ಕನಕನಾಯಕರೆನಿಸಿದ್ದ ತಿಮ್ಮಪ್ಪನಾಯಕ ಧನ-ಕನಕಗಳನ್ನೆಲ್ಲಾ ತೊರೆದು ಕನಕದಾಸರಾದರು. ಮೊದಲು ಕನಕಕ್ಕೆ ದಾಸರಾಗಿದ್ದ ಅವರು ಅನಂತರ ಕನಕನನ್ನೇ ದಾಸನನ್ನಾಗಿ ಮಾಡಿಕೊಂಡರು. ತಮ್ಮ ಜೀವನದಲ್ಲಿ ಮತ್ತೆಂದೂ ಅದಕ್ಕೆ ವಶವಾಗದಂತೆ ಬದುಕಿದರು. ಭಗವಂತನನ್ನು ''ಈಶ'' ಎಂದು ತಿಳಿದ ಅವರಿಗೆ ಬಂದ ಧನ್ಯತೆ ಕನಕನಾಯಕರಾಗಿದ್ದಾಗ ಎಂದೂ ಬಂದಿರಲಿಲ್ಲ : **ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು । ಪದುಮನಾಭನ ಪಾದದೊಲುಮೆ ಎನಗಾಯಿತು.** ಒಂದರ್ಥದಲ್ಲಿ ಅವರು ಮೊದಲೂ ಕನಕದಾಸರು. ಅನಂತರವೂ ಕನಕದಾಸರು. ಮೊದಲ ಅರ್ಥದಲ್ಲಿ ಕನಕದಾಸರಾಗುವ ಜನ ಲೋಕದಲ್ಲಿ ಬಹಳವಾಗಿ ಸಿಕ್ಕುತ್ತಾರೆ, ಎರಡನೆಯ ಅರ್ಥದಲ್ಲಿ ಕನಕದಾಸರಾಗುವುದು ಮಾತ್ರ ಕನಕದಾಸರಂಥವರಿಗೇ ಸಾಧ್ಯ.

ಹೀಗೆ ಕನಕದ ದಾಸ್ಯವನ್ನು ತೊರೆದು ಭಗವಂತನ ದಾಸ್ಯದತ್ತ ಧಾವಿಸಿದ್ದೇ ಕನಕದಾಸರ ಪ್ರಮುಖ ಜೀವನಾದರ್ಶ. ''ಕನಕದಾಸರು ಮೂಲತಃ ನಿರಕ್ಷರ



ಕುಕ್ಷಿಗಳು. ಹರಿದಾಸರಾಗುತ್ತಲೇ ಕವಿಗಳಾಗಿ ಬದಲಾಗಿ ಬಿಟ್ಟರು'' ಎಂಬ ಭಾವನೆ ಜನಗಳಲ್ಲಿ ಪ್ರಚಾರದಲ್ಲಿದೆ. ಆದರೆ ಕನಕದಾಸರ ಪ್ರಮುಖ ಕೃತಿಗಳಲ್ಲಿ ಒಂದಾದ ಮೋಹನತರಂಗಿಣಿಯಿಂದ ವ್ಯಕ್ತವಾಗುವಂತೆ ಅವರು ಹರಿದಾಸರಾಗುವ ಮುನ್ನವೇ ಮಹಾಕವಿಗಳಾಗಿದ್ದರು. ಉದ್ದಾಮಪಂಡಿತರಾಗಿದ್ದರು, ಅವರ ಮೋಹನತರಂಗಿಣಿ ಒಂದು ಉತ್ತಮ ಶ್ರೇಣಿಯ ಮಹಾಕಾವ್ಯ. ಅದು ಅವರು ಹರಿದಾಸ ದೀಕ್ಷೆ ಸ್ವೀಕರಿಸುವ ಮುನ್ನ ಬರೆದ ಕೃತಿ ಎನ್ನಲು ಅದರಲ್ಲಿ ಕಂಡುಬರುವ ರಾಮಾನುಜಾಚಾರ್ಯರ ಉಲ್ಲೇಖ ಸಾಕ್ಷಿಯಾಗಿದೆ. ಹರಿದಾಸರ ಪರಮತತ್ವಗಳಲ್ಲಿ ಹರಿಸರ್ವೋತ್ತಮತ್ವದಂತೆ ವಾಯು ಜೀವೋತ್ತಮತ್ವವೂ ಸೇರಿದೆ. ಅದರಂತೆ ಅವರಿಗೆ ಶ್ರೀಮಧ್ವಾಚಾರ್ಯರೇ ಮುಖ್ಯಗುರುಗಳು. ಶ್ರೀಮಧ್ವರ ಹೆಸರೇ ಎತ್ತದ ಮೋಹನತರಂಗಿಣಿ ಅವರ ಪೂರ್ವಜೀವನದ ರಚನೆ ಎನ್ನುವುದು ಸ್ಪಷ್ಟ. ಅವರು ಹರಿದಾಸರಾದ ನಂತರ ಶ್ರೀಮಧ್ವರ ಪರಮಗುರುತ್ವವನ್ನು ಒಪ್ಪಿಕೊಂಡಿದ್ದಕ್ಕೆ **''ಪರಮಪದವೀವ ಗುರು ಮುಖ್ಯಪ್ರಾಣ'', ''ಅಂಥಂತಮಸ್ಸು ಮತ್ತಿನ್ಯಾರಿಗೆ''** ಮೊದಲಾದ ಕೃತಿಗಳು ಸಾಕ್ಷಿಯಾಗಿವೆ. ಭಗವದ್ಭಕ್ತಿ, ವಿಷಯವಿರಕ್ತಿಗಳು ಹರಿದಾಸಸಾಹಿತ್ಯದ ಮತ್ತೊಂದು ಅಸಾಧಾರಣಲಕ್ಷಣ. ಆದರೆ ಮೋಹನತರಂಗಿಣಿಯಲ್ಲಿ ಭಕ್ತಿರಸಕ್ಕಿಂತ ಶೃಂಗಾರರಸಕ್ಕೇ ಹೆಚ್ಚಿನ ಪ್ರಾಧಾನ್ಯ. ಈ ಕಾರಣದಿಂದಲೂ ಅದು ಅವರ ಪೂರ್ವಜೀವನದ ರಚನೆ ಎಂದು ಸ್ಥಿರಪಡುತ್ತದೆ.

ಮೋಹನತರಂಗಿಣಿಯಂತಹ ಉತ್ತಮ ಮಹಾಕಾವ್ಯವೊಂದನ್ನು ರಚಿಸಿದ ಪ್ರೌಢಚೇತನ ಹರಿದಾಸದೀಕ್ಷೆಗೆ ಶರಣಾದದ್ದು ಅವರ ಶೃಂಗಾರ ಪ್ರಧಾನವಾದ ದೃಷ್ಟಿ ಭಕ್ತಿಮಯವಾಗಿ ಪರಿವರ್ತನವಾಗಿದ್ದಕ್ಕೆ ದ್ಯೋತಕ. ಒಂದು ಕ್ಷೇತ್ರದಲ್ಲಿ ಅಸಾಮಾನ್ಯಸಿದ್ಧಿಯನ್ನು ಕಂಡ ಚೇತನಕ್ಕೆ ಮತ್ತೊಂದು ಆದರ್ಶ ಒಪ್ಪಿಗೆಯಾಗುವುದು ಅಷ್ಟಾಗಿ ಕಂಡು ಬರದ ಒಂದು ವಿಶಿಷ್ಟ ಮನೋಧರ್ಮ. ಅನೇಕ ಸಮಕಾಲೀನ ಕವಿಗಳು ಕಾವ್ಯ ಬರೆಯುವುದಕ್ಕಿಂತ ತಾವು ಹಿಡಿದ ಪಂಥವನ್ನೇ ಸರಿ ಎಂದು ಸಾಧಿಸುವುದರಲ್ಲೇ ಉಳಿದ ಆಯುಷ್ಯ ಕಳೆಯುವ ಕೆಲವು ನಿದರ್ಶನಗಳು ಇದಕ್ಕೆ ಪುಷ್ಟಿಯೀಯುತ್ತವೆ. ಆದರೆ ಸಾಧಿಸಿದ್ದಕ್ಕಿಂತ ಉತ್ತಮಗುರಿ ಗೋಚರಿಸಿದಾಗ ಒಂದು ಪರಿಪಕ್ವಚೇತನ ಮೊದಲ ದೃಷ್ಟಿಯನ್ನು ಬದಲಿಸಿಕೊಳ್ಳುವುದು ಹೇಗೆ ಆರೋಗ್ಯಕರ ಎನ್ನಲು ಇದು ಸಾಕ್ಷಿ. ಶೃಂಗಾರದಲ್ಲಿ ಸಾರ್ಥಕ್ಯ ಕಾಣುವ ದೃಷ್ಟಿ ಭಗವಂತನ ಸರ್ವೋತ್ತಮತ್ವದಲ್ಲಿ ಆನಂದ ಕಾಣುವ ಹಂತ ತಲುಪಿದ್ದು ಅವರು ಹಿಡಿದ ಪ್ರಗತಿಪಥಕ್ಕೆ ಸೂಚಿ.

ಇದು ಒಂದರ್ಥದಲ್ಲಿ ಹರಿದಾಸದೀಕ್ಷೆ ತಂದುಕೊಡುವ ಅನನ್ಯಸಾಧಾರಣ ಸಿದ್ಧಿಯೂ ಆಗಿದೆ.

ಹರಿದಾಸಸಾಹಿತ್ಯದ ಭೀಷ್ಮರೆನಿಸಿದ ಶ್ರೀಪುರಂದರದಾಸರೂ ಸಹಾ ಹೀಗೆಯೆ ನವಕೋಟಿ ಸಂಪತ್ತನ್ನು ತೊರೆದು ನಾರಾಯಣನತ್ತ ಧಾವಿಸಿದ ಹಿರಿಯಚೇತನ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಶೃಂಗಾರ ಭೋಗಕ್ಕೆ ಸೀಮಿತವಾದರೆ, ವೈರಾಗ್ಯ - ಭಕ್ತಿಭಾವಗಳು ತ್ಯಾಗದತ್ತ ಸೆಳೆಯುತ್ತವೆ. ಭೋಗದ ಆನಂದ ಕ್ಷಣಿಕವಾದರೆ, ತ್ಯಾಗದ ಆನಂದ ಶಾಶ್ವತವಾದುದು. ಶೃಂಗಾರಕ್ಕೆ ಉದ್ವೇಗದ ಅಪಾಯವಿದ್ದರೆ, ತ್ಯಾಗಕ್ಕೆ ಉಲ್ಲಾಸದ ಹಿರಿಮೆ ಇದೆ. ಇದರ ಹಿನ್ನಲೆಯಲ್ಲಿ ಕನಕದಾಸರ ಬದಲಾದ ಜೀವನ ಮೌಲ್ಯದ ಮಹತ್ವ ಅರಿವಾಗುತ್ತದೆ.

ಸೋಸಲೆಯ ಶ್ರೀವ್ಯಾಸರಾಜರು ಮತ್ತು ಸೋದೆಯ ಶ್ರೀವಾದಿರಾಜರು ಬಾಡದ ಶ್ರೀಕನಕದಾಸರ ಜೀವನವನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಇಬ್ಬರು ಮಹನೀಯರು. ಇದರಲ್ಲಿ ಶ್ರೀವಾದಿರಾಜರನ್ನು ಶ್ರೀವ್ಯಾಸರಾಯರ ಶಿಷ್ಯರು ಎಂದೂ ಸಹ ಹೇಳುವುದುಂಟು. ಶ್ರೀವ್ಯಾಸರಾಜರು ತಮ್ಮ ಪ್ರತಿಭೆ ಪಾಂಡಿತ್ಯಗಳಿಂದ ದ್ವೈತವೇದಾಂತದ ಇತಿಹಾಸದಲ್ಲಿ ಮುನಿತ್ರಯರಲ್ಲೊಬ್ಬರೆಂದು ಪರಿಗಣಿತರಾಗಿರುವ ಮಹನೀಯರು. ತಮ್ಮ ವೈದುಷ್ಯದಿಂದ ಪರವಾದಿಗಳಿಗೆ ಸಿಂಹಸ್ವಪ್ನವಾಗಿ, ಜ್ಞಾನಪಿಪಾಸುಗಳ ಪಾಲಿಗೆ ಕಾಮಧೇನುಸದೃಶರಾಗಿ ಬಾಳಿದವರು. ವಿಜಯೀಂದ್ರತೀರ್ಥರಂತಹ ವ್ಯಾಸಸಾಹಿತ್ಯದ ಧುರೀಣರನ್ನೂ, ಪುರಂದರದಾಸರಂತಹ ದಾಸವರೇಣ್ಯರನ್ನೂ ರೂಪಿಸಿದ ಇವರ ಗರಡಿಯಿಂದ ಹೊರಬಂದವರು ಕನಕದಾಸರು ಎಂಬಲ್ಲಿ ಅವರ ಹಿರಿಮೆಯ ಮತ್ತೊಂದು ಮುಖ ಅಡಗಿದೆ. ಶೂದ್ರನೊಬ್ಬ ಹರಿದಾಸನಾಗುವಲ್ಲಿ ಅವರು ವಹಿಸಿದ ದೀಕ್ಷೆ ಅಸಾಧಾರಣವಾದುದು. ಕನಕದಾಸರಿಗೆ ದಾಸದೀಕ್ಷೆಯಿತ್ತ ಗುರುಗಳಾಗಿ ಮಾತ್ರವಲ್ಲದೇ ಅವರ ಹಿರಿಮೆಯನ್ನು ಸಮಾಜಕ್ಕೆ ತಿಳಿಸಿಕೊಡುವಲ್ಲಿಯೂ ಅವರು ವಹಿಸಿದ ಶಾಸ್ತ್ರೀಯ ರೀತಿ ಆದರ್ಶಪ್ರಾಯವಾದುದು.

ಸೋದೆಯ ಶ್ರೀವಾದಿರಾಜರು ಕನಕದಾಸರ ಮೇಲೆ ಪ್ರಭಾವ ಬೀರಿದ ಮತ್ತೊಬ್ಬ ಮಹನೀಯರು. ಶೂದ್ರನೊಬ್ಬನನ್ನು ಉಡುಪಿಗೆ ಆಹ್ವಾನಿಸಿ ಶ್ರೀಕೃಷ್ಣನ ಸೇವೆಗೆ ಅವಕಾಶ ಮಾಡಿಕೊಟ್ಟಿದ್ದರಲ್ಲಿ ಅವರು ವಹಿಸಿದ ಪಾತ್ರ ತುಂಬಾ ಹಿರಿದು. ಉಡುಪಿಗೆ ಬಂದು ಹೋಗುವ ಜನಕ್ಕೆ ಲೆಕ್ಕವಿಲ್ಲ. ಆದರೆ



ಕನಕದಾಸರಂತೆ ಉಡುಪಿಯಲ್ಲಿ ಇತಿಹಾಸ ಮಾಡಿದ ವ್ಯಕ್ತಿಗಳು ಮಾತ್ರ ಬಹಳ ವಿರಳ. ಉಡುಪಿ ಎಂದರೆ **''ಕನಕನ ಕಿಂಡಿ''** ಎಂಬುದು ಸಾಮಾನ್ಯ ಯಾತ್ರಿಕನಿಗೂ ತಿಳಿದಿರುವ ಮಾತು ಎಂದರೆ ಕನಕದಾಸರ ಉಡುಪಿಯ ಸಂಬಂಧ ಮನವರಿಕೆಯಾದೀತು. ಉಡುಪಿಯಲ್ಲಿ ಕನಕದಾಸರ ಸ್ಮಾರಕವಾಗಿ ಕನಕನ ಕಿಂಡಿ ಮಾತ್ರವಲ್ಲದೆ ಗಂಜಿಯ ನೈವೇದ್ಯ ಮೊದಲಾದವುಗಳು ಉಳಿದುಕೊಂಡಿವೆ. ಅನೇಕ ತಾಡವಾಲೆಗಳಲ್ಲಿ ಅವರ ಉಡುಪಿಯ ವಾಸ ದಾಖಲಾಗಿದೆ. ಯುಕ್ತಿಮಲ್ಲಿಕೆಯಂತಹ ಗ್ರಂಥರತ್ನವನ್ನು ರಚಿಸಿದ ಬುದ್ಧಿಗೆ ಅಬ್ರಾಹ್ಮಣನ ಭಗವದ್ಭಕ್ತಿಯನ್ನು ಗುರುತಿಸುವ ಹೃದಯವಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ಹೀಗೆ ಇಬ್ಬರು ರಾಜರ ನಡುವೆ ತಮ್ಮ ಜೀವನ ರೂಪಿಸಿಕೊಂಡ ಕನಕದಾಸರು ನಮ್ಮೆಲ್ಲರ ವಿಷಯದಾಸ್ಯವನ್ನು ಬಿಡಿಸಬಲ್ಲಂತಹ ಆದರ್ಶ ಬಾಳನ್ನು ಬಾಳಿದರು. ಈ ಇಬ್ಬರೂ ಮೂಲತಃ ಕನ್ನಡದಲ್ಲಿ ಕ್ರಮವಾಗಿ ವಿಟ್ಠಲಪದವಿರದ ಸಿರಿಕೃಷ್ಣ , ಹಯವದನ ಎಂಬ ಅಂಕಿತಗಳಿಂದ ನೂರಾರು ಕೃತಿಗಳನ್ನು ರಚಿಸಿದ ಶ್ರೇಷ್ಠಹರಿದಾಸರಾಗಿ ಸಹ ಮಾನ್ಯವಾಗಿದ್ದಾರೆ. ಈ ಇಬ್ಬರ ಬಗ್ಗೆಯೂ ಕನಕದಾಸರು ರಚಿಸಿರುವ ಒಂದು ಕೃತಿಯೂ ಉಪಲಬ್ಧವಿಲ್ಲೆಂಬುದು ಸೋಜಿಗ. ಆದರೆ ಶ್ರೀವ್ಯಾಸರಾಯರು ಗುರುಗಳು ಎನ್ನಲು, ಶ್ರೀವಾದಿರಾಜರು ಇವರ ಮೇಲೆ ಪ್ರಭಾವ ಬೀರಿದ್ದರು ಎನ್ನಲು ಇತಿಹಾಸವೂ, ಹರಿದಾಸಸಾಹಿತ್ಯ-ಪರಂಪರೆಯೂ ಪ್ರಬಲ ಆಧಾರವಾಗಿವೆ (**'ತ್ರಿವಿಕ್ರಮದಾಸಸ್ಯ ದಾಸ'** - ಮೋಹನತರಂಗಿಣಿ).

ಈ ಇಬ್ಬರೂ ರಾಜರು - ಆದರೆ ಕನಕದಾಸರು ದಾಸರು. ಆದರೆ ಈ ಮೂವರೂ ಹರಿದಾಸರು ಹೌದು; ಇನ್ನೊಂದರ್ಥದಲ್ಲಿ ಈ ಮೂವರು ವಿಷಯಗಳ ಮೇಲೆ ವಿಜಯ ಸಾಧಿಸಿದ ರಾಜರೂ ಹೌದು. ಇಂತಹ ವೈಶಿಷ್ಟ್ಯ-ವನ್ನು ಭಗವಂತನನ್ನು ನಂಬಿ ಬಾಳು ಸಾಗಿಸಬಲ್ಲ ಹಿರಿಯ ಚೇತನಗಳಷ್ಟೇ ಸಾಧಿಸಬಹುದು. ಹಾಗಲ್ಲದವರು ಜೀವನಪೂರ್ತಿ ಉಳಿಯುವುದು ವಿಷಯಗಳ ದಾಸರಾಗಿ ಮಾತ್ರ.

ಉಡುಪಿಯ ಶ್ರೀಕೃಷ್ಣ ಕನಕದಾಸರಿಗೆ ಒಲಿದು ಅಸಾಮಾನ್ಯ ರೀತಿಯಲ್ಲಿ ದರ್ಶನವಿತ್ತ ಎಂಬುದು ಇತಿಹಾಸ. ಶ್ರೀಕೃಷ್ಣನನ್ನು ತಾವು ಇದ್ದಲ್ಲಿಂದಲೇ ಕಂಡದ್ದು ಕನಕದಾಸರ ಆದರ್ಶ. ಇದು ಒಂದರ್ಥದಲ್ಲಿ ಭಗವದ್ಗೀತೆ ಉಪದೇಶಿಸಿದ

ನಿಷ್ಕಾಮಕರ್ಮದ ಪ್ರತೀಕವೇ ಆಗಿದೆ : ''ಸ್ವೇ ಸ್ವೇ ಕರ್ಮಣ್ಯಭಿರತಃ ಸಿದ್ಧಿಂ ವಿಂದತಿ ಮಾನವಃ''.

ಒಳಗೆ ವಿಷಯಗಳನ್ನು ತುಂಬಿಕೊಂಡು ಎಲ್ಲಿಗೆ ಹೋದರೂ ಭಗವಂತ ಕಾಣಲಾರ. ಮನಸ್ಸಿನಲ್ಲಿ ಭಗವಂತನ ಚಿಂತನೆ ಇದ್ದರೆ ಇದ್ದಲ್ಲೇ ಅವನ ದರ್ಶನ ಸಾಧ್ಯ ಎಂಬ ಇಲ್ಲಿಯ ತತ್ತ್ವ ''ಸಂಗ್ರಹವೇದಾಂತ''ವೇ ಆಗಿದೆ.

ಎದುರೇ ಇದ್ದೂ ಕೃಷ್ಣನನ್ನು ಕಾಣದೇ ಅವನಿಗೆ ತೊಡಿಸಿದ ಕನಕಮಯ ಆಭರಣಗಳನ್ನು ಮಾತ್ರವೇ ಕಂಡು ಬರುವ ಜನ ಇದನ್ನು ಅರಿತಾಗಲೇ ಜೀವನ ಹೊನ್ನಾದೀತು.

ಅವರಿಗೆ ಕಲ್ಲಿನ ಗೋಡೆ ಅಡ್ಡವಾಗಿತ್ತು. ಆದರೆ ಅವರ ಮನಸ್ಸಿಗೆ ಕಾಮ ಕ್ರೋಧಗಳ ತೆರೆ ಇರಲಿಲ್ಲ. ಅದಕ್ಕೇ ಅವರಿಗೆ ಕೃಷ್ಣ ಕಾಣಿಸಿದ. ನಮಗೆ ಕಲ್ಲಿನ ಗೋಡೆಯು ಅಡ್ಡ ಇಲ್ಲದೇ ಹೋದರೂ ಮನಸ್ಸಿಗೆ ಕಾಮಾದಿಗಳ ತೆರೆ ಮುಸುಕಿಯೇ ಇರುತ್ತದೆ. ಅದಕ್ಕೇ ಭಗವಂತ ನಮಗೆ ಕಾಣದೇ ಹೋಗುತ್ತಾನೆ. ನಮ್ಮ ಕಣ್ಣೆದುರು ಕೃಷ್ಣ ಇದ್ದರೂ ಮನಸ್ಸಿನ ಎದುರು ವಿಷಯಗಳು ತುಂಬಿರುತ್ತವೆ. ಅವರಿಗೆ ಎದುರು ಗೋಡೆಯಾದರೂ ಒಳಗೆ ಭಗವಂತನದೇ ಚಿಂತೆ. ಆದ್ದರಿಂದ ನಾವು ದೇವರನ್ನು ಕಾಣದಿದ್ದಲ್ಲಿ ಆಶ್ಚರ್ಯವಿಲ್ಲ; ಅವರು ದೇವರನ್ನು ಕಂಡಿದ್ದರಲ್ಲೂ ಆಶ್ಚರ್ಯವಿಲ್ಲ.

ಹರಿಭಕ್ತಿಸಾರ ಎಂಬ ಅವರ ಕೃತಿಯ ಹೆಸರೇ ಒಂದು ರೀತಿಯಲ್ಲಿ ಅವರ ಜೀವನಾದರ್ಶ. ಹರಿಭಕ್ತಿಯೇ ಸಕಲ ಜೀವನದ ಒಟ್ಟು ಸಾರ ಎಂಬ ಇಲ್ಲಿಯ ಭಾವ ವೇದಾಂತದ ಸಾರಸರ್ವಸ್ವ. ಅವರ ಎಲ್ಲ ಕೃತಿಗಳೂ ಒಂದರ್ಥದಲ್ಲಿ ''ಹರಿಭಕ್ತಿಸಾರ''ಗಳೆನಿಸಿವೆ. ''ಈಶ ನಿನ್ನ ಚರಣಭಜನೆ'' ಎಂಬ ಅವರ ಕೃತಿ ಕೇಶವನಾಮವನ್ನು ಕುರಿತ ಕೃತಿಗಳಲ್ಲೆಲ್ಲ ಅಗ್ರಮಾನ್ಯವೆನ್ನಿಸಿ, ಮಂತ್ರತುಲ್ಯವೆನ್ನಿಸಿ ವೈಷ್ಣವರಲ್ಲಿ ನಿತ್ಯಪಠ್ಯವಾಗಿದೆ. ''ತನು ನಿನ್ನದು ಜೀವನ ನಿನ್ನದು ರಂಗ'', ''ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ'', ''ತಲ್ಲಣಿಸದಿರು ಕಂಡ್ಯ ತಾಳು ಮನವೆ'' ಮೊದಲಾದ ಅವರ ಅನೇಕಕೃತಿಗಳು ಎಲ್ಲ ಕಾಲಕ್ಕೂ ಸಲ್ಲುವಂತಹ ಶ್ರೇಷ್ಠರಚನೆಗಳು.

*****



**ಗೋಮಾತೆಯ ಸೇವೆಗೆ ಒಂದು ಸುವರ್ಣಾವಕಾಶ**

**ಗೋವರ್ಧನ ಗಿರಿ ವಿಶ್ವಸ್ತ ಮಂಡಳಿ**

**ಶ್ರೀಪೇಜಾವರ ಅಧೋಕ್ಷಜ ಮಠ, ಉಡುಪಿ**

ಶ್ರೀಮನ್ಮಧ್ವಾಚಾರ್ಯರಿಂದ ಸಂದರ್ಶಿತವಾದ ಕೊಡವೂರಿನಲ್ಲಿ ಸುಮಾರು ಎರಡು ಎಕರೆ ಜಾಗದಲ್ಲಿ ಗೋಶಾಲೆಯನ್ನು ಹದಿನೇಳು ವರ್ಷಗಳಿಂದ ನಡೆಸುತ್ತಿರುವ ಗೋವರ್ಧನಗಿರಿ ವಿಶ್ವಸ್ತ ಮಂಡಳಿಯು ಉಡುಪಿಯಿಂದ ಇಪತ್ತು ಕಿ.ಮೀ. ದೂರದ ನೀಲಾವರದಲ್ಲಿ ಇಪ್ಪತ್ತೆಂಟು ಎಕರೆ ಪ್ರದೇಶದಲ್ಲಿ ನಾಲ್ಕು ಹಟ್ಟಿಗಳುಳ್ಳ ಗೋಶಾಲೆಯೊಂದನ್ನು ತೆರೆದಿದೆ. ಈಗ ಅಲ್ಲಿ ಒಟ್ಟು ೬೫೦ಕ್ಕಿಂತ ಹೆಚ್ಚು ಗೋವುಗಳ ಸಂರಕ್ಷಣೆ ನಡೆದಿದೆ. ಅದಕ್ಕೆ ಪ್ರತಿ ತಿಂಗಳು ಸುಮಾರು ಎರಡು ಲಕ್ಷ ರುಪಾಯಿಗಳ ಖರ್ಚು ತಗಲುತ್ತಿದೆ. ಅದನ್ನು ನಿರ್ವಹಿಸಲು ನಮ್ಮ ವಿಶ್ವಸ್ತ ಮಂಡಳಿಯು ಯೋಜನೆಯೊಂದನ್ನು ರೂಪಿಸಿದ್ದು ಅದರ ಸದುಪಯೋಗ ಪಡೆಯಲು ಆಸ್ತಿಕರನ್ನು ವಿನಂತಿಸಿಕೊಳ್ಳಲಾಗಿದೆ. ಗೋವುಗಳಲ್ಲಿ ಸಮಸ್ತದೇವತೆಗಳ ಸನ್ನಿಧಾನ ಹಾಗೂ ಶ್ರೀಲಕ್ಷ್ಮೀನಾರಾಯಣರ ವಿಶೇಷ ಸನ್ನಿಧಾನ. ಈ ಗೋಸೇವೆಯ ಅವಕಾಶ ಜನ್ಮಜನ್ಮಾಂತರದ ಸುಕೃತದ ಫಲ.

| | |
|---|---|
| ೧. ಮಹಾಪೋಷಕರು (ಆಜೀವ ಸದಸ್ಯರು) | ರೂ. ೧,೦೦,೦೦೦ |
| ೨. ಪೋಷಕರು (೧೦ ವರ್ಷಗಳ ಸದಸ್ಯತ್ವ) | ರೂ. ೫೦,೦೦೦ |
| ೩. ವಾರ್ಷಿಕ ಸದಸ್ಯರು | ಪ್ರತಿವರ್ಷ ರೂ. ೧೦,೦೦೦ |
| ೪. ಸಾಮಾನ್ಯ ಸದಸ್ಯರು | ಪ್ರತಿವರ್ಷ ರೂ. ೨,೫೦೦ |

ವಿ.ಸೂ. : ಆಸಕ್ತರು 'ಗೋವರ್ಧನಗಿರಿ ವಿಶ್ವಸ್ತ ಮಂಡಳಿ', ಶ್ರೀಪೇಜಾವರಮಠ ಉಡುಪಿ - ಇವರಿಗೆ ನಗದು, ಚೆಕ್, ಡಿಡಿ ಮೂಲಕ ಸೇವೆ ಸಲ್ಲಿಸಬಹುದು.

**ರಾಮಾಯಣದಲ್ಲಿ ಲಕ್ಷ್ಮಣ, ಭರತ, ಶತ್ರುಘ್ನರಲ್ಲಿ ಕ್ರಮವಾಗಿ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರೂಪೀ ಶ್ರೀಹರಿಯ ವಿಶೇಷಸನ್ನಿಧಾನ; ಶ್ರೀರಾಮನಂತೂ ಸಾಕ್ಷಾತ್ ವಾಸುದೇವ. ಮಹಾಭಾರತದಲ್ಲಿ ಶ್ರೀಕೃಷ್ಣ ಸಾಕ್ಷಾತ್ ವಾಸುದೇವ; ಬಲರಾಮ, ಪ್ರದ್ಯುಮ್ನ, ಅನಿರುದ್ಧರಲ್ಲಿ ಕ್ರಮವಾಗಿ ಶ್ರೀಹರಿಯ ಸಂಕರ್ಷಣ, ಪ್ರದ್ಯುಮ್ನ ಹಾಗೂ ಅನಿರುದ್ಧರೂಪಗಳ ವಿಶೇಷಸನ್ನಿಧಾನ. ಹೀಗೆ ರಾಮಾಯಣ ಹಾಗೂ ಮಹಾಭಾರತಗಳಲ್ಲಿ ವಾಸುದೇವಾದಿಚತುರ್ವ್ಯೂಹ-ರೂಪಗಳು ಪಾಲ್ಗೊಂಡಿರುವುದು ವಿಶೇಷ.**

# ಪ್ರತಿಕ್ರಿಯೆ

**- ಶ್ರೀ ಆದ್ಯ ರಾಮಾಚಾರ್ಯ**
೧೧೪ Y, ಭೀಮರಥಿ, ೪ನೇ ಮೈನ್,
ಬಿ.ಎಸ್.ಕೆ., ಬೆಂಗಳೂರು-೮೫

**ಶ್ರೀಶಾಯ ನಮಃ**

ಶ್ರೀ ರಾ.ರಾ. ಆಚಾರ್ಯರಿಗೆ ಕೃತಾನೇಕ ವಂದನೆಗಳು. ಉಭಯ ಕುಶಲೋಪರಿ ಸಾಂಪ್ರತ ಸರ್ವಕುಶಲ.

ಮಾನವನ ಜೀವನದಲ್ಲಿ ಒಂದು ಕಾಲದಲ್ಲಿ ನಡೆದುಹೋದ ಘಟನೆಗಳು ಇನ್ನಾವುದೋ ಸಂದರ್ಭದಲ್ಲಿ ಸ್ಮರಣೆಗೆ ಬರುವುದು ಸಹಜವಲ್ಲವೇ? ಹಲವು ವರುಷಗಳ ಹಿಂದೆ ಪೂಜ್ಯರ ದರ್ಶನಾಪೇಕ್ಷಿಗಳಾಗಿ ಹೋದಾಗ ವಿಪರೀತ ಗದ್ದಲ, ದೊಂಬಿ, ನೂಕು ನುಗ್ಗಲಲ್ಲಿ ಸಿಲುಕಿ ಕುಸಿದು ಬಿದ್ದಾಗ ಎಚ್ಚರವಿರಲಿಲ್ಲ. ಯಾರೋ ಪುಣ್ಯಾತ್ಮರು ನನ್ನನ್ನು ಜಯನಗರದ ನರ್ಸಿಂಗ್ ಹೋಂಗೆ ಸೇರಿಸಿದ್ದರು. ಈ ವಿಚಾರವು ಕುಟುಂಬದವರಿಗೆ ಗೊತ್ತಾದದ್ದು ರಾತ್ರಿ ಹತ್ತು ಗಂಟೆಗೆ. ಅವರು ಬಂದಾಗಲೂ ಎಚ್ಚರವಿರಲಿಲ್ಲವಂತೆ. ಸೀಳಿದ ಮೂಳೆಗೆ (ತೊಡೆ) ಪರಿಣಿತರು ಸರಿಮಾಡಲು ಪ್ರಯತ್ನಿಸಿದ್ದರಂತೆ. ಅಂತು ಹೇಗೋ ಕೆಲವು ದಿನ ಕಳೆದ ಮೇಲೆ ಗೂಡು ಸೇರಿಕೊಂಡೆ. ಈ ಎಲ್ಲ ಘಟನೆಗಳ ಸ್ಮರಣೆ ಬರುವಂತಾದುದು ‘‘ಶ್ರೀ ವ್ಯಾಸಮಧ್ವ ಪತ್ರಿಕೆಯಲ್ಲಿ ಸಂಪುಟ -೨ ಸಂಚಿಕೆ-೬ ಆಗಸ್ಟ್ ತಿಂಗಳಲ್ಲಿ ಪ್ರಕಟವಾದ ಪುಟ ೧೬ರಲ್ಲಿ ದೊರೆತ ಸಂಪಾದಕೀಯ ಲೇಖನದಿಂದ. ಈಗ ೮೫ರ ಆರಂಭದಲ್ಲಿರುವಾಗ ವಯೋಮಾನದಿಂದಲೋ ಅಥವಾ ಬೇರಾವ ಕಾರಣಗಳಿಂದಲೋ ನಡೆದಾಡಲು ಬರದಂತಾಗಿದೆ. ಹೆಚ್ಚು ಕೂಡಲು ಅಥವಾ ಬರೆಯಲು ಸಾಹಸ ಪಡಬೇಕಾಗಿದೆ. ಇದೆಲ್ಲ ಕಾಲದ ಮಹಿಮೆ.

ಶ್ರೀ ವ್ಯಾಸಮಧ್ವ ಸಂಚಿಕೆ ಆತ್ಮೀಯರಿಂದ ನೋಡಲು ದೊರೆಯಿತು. ತುಂಬ ಚೆನ್ನಾಗಿದೆ. ಹೃದ್ಯಗಮ್ಯ ಹಾಗೂ ಬೋಧಪ್ರದ ಲೇಖನಗಳಿಂದ ಸಂಚಿಕೆಯು ತುಂಬ ಹಿಡಿಸಿತು. ಮುಖಪುಟದೊಂದಿಗೆ ಒಳ್ಳೆ ಕಾಗದ ಹಾಗೂ ಮಾಸದ ವಿಶೇಷಗಳ ಪರಿಚಯದಿಂದಾಗಿ ತುಂಬ ಹಿಡಿಸಿತು. ಇದು ಒಳ್ಳೆಯ ಪ್ರಯೋಗವೆಂದೆನಿಸಿತು.

ಸಂಪಾದಕೀಯದ ವಿಚಾರವನ್ನು ಕುರಿತು ಹೇಳಬೇಕಾದಲ್ಲಿ ಸಾಮಾನ್ಯವಾಗಿ ನಮ್ಮಲ್ಲಿ ವೈರಾಗ್ಯ ಸಂಪನ್ನರಿಗೆ ಆಶ್ರಮ ದೊರೆಯುವುದು ಸುಲಭವಲ್ಲ. ಪೀಠ ಹಾಗೂ ಸಮಾಜದ ಮೇಲೆ ತಮ್ಮ ಹಿಡಿತವನ್ನು ಅಪೇಕ್ಷಿತರಾಗಿ ಆತ್ಮೀಯರಿಗೋ



ಅಥವಾ ಸ್ವಬಾಂಧವರಿಗೋ ಬಲವಂತದ ಮಾಘಸ್ನಾನ ಮಾಡಿಸುವುದೇ ಸಂಪ್ರದಾಯವಾಗಿದೆ. ಇದರಿಂದಾಗಿ ಅಂಥವರ ಗಮನವು ವಿಶೇಷವಾಗಿ ಅರ್ಥಪ್ರಧಾನವಾಗಿರುವುದೇ ಎದ್ದು ತೋರುತ್ತದೆ. ಇಂಥವರಿಂದ ಸಿದ್ಧಾಂತದ ವಿಚಾರದಲ್ಲಿ ಅಥವಾ ಸಮಾಜದ ಸರ್ವತೋಮುಖ ಅಭಿವೃದ್ಧಿಯ ವಿಚಾರದಲ್ಲಿ ಶ್ರದ್ಧೆ ಅಥವಾ ಕಳಕಳಿಯನ್ನು ಅಪೇಕ್ಷಿಸುವುದು ಹೇಗೆ ಸಾಧ್ಯ ಎಂದೆನಿಸುತ್ತದೆ.

ತಾವು ಬಹು ಗಾಂಭೀರ್ಯದಿಂದ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿರುವುದನ್ನು ನಾನು ತುಂಬ ಮೆಚ್ಚಿಕೊಂಡಿರುವೆ. ತಮ್ಮ ತಪಸ್ಸು ದೊಡ್ಡದು, ಸಾಹಸವು ಅಷ್ಟೆ.

ತಮ್ಮ ಅಭಿವೃದ್ಧಿಯ ಚಿಂತಕ,
**ಆದ್ಯ ರಾಮಾಚಾರ್ಯ**

*****

# ನವಪ್ರಕಾಶಿತ ಮಾಧ್ವಗ್ರಂಥಗಳು

**೧) ಶ್ರೀಮದ್ಭಾಗವತಮ್ (ತಮಿಳುಲಿಪಿಯಲ್ಲಿ ಮೂಲಶ್ಲೋಕ, ೧ ರಿಂದ ೬ನೇ ಸ್ಕಂಧದವರೆಗೆ, ಪ್ರತಿ ಅಧ್ಯಾಯದ ತಮಿಳು ಸಾರಾಂಶದೊಂದಿಗೆ)**; ಲೇಖಕರು: ಕುಂಭಕೋಣಂ ಶ್ರೀರಾಮಾಚಾರ್ಯ, ಪುಟಗಳು: ೬೭೩, ಬೆಲೆ: ರೂ.೨೦೦; ಪ್ರಕಾಶಕರು: ಮಂತ್ರಾಲಯಂ ಶ್ರೀರಾಘವೇಂದ್ರಸ್ವಾಮಿ ಮಠ; ಪ್ರತಿಗಳು ದೊರೆಯುವ ಸ್ಥಳ: ಶ್ರೀ **ರಾಮಾಚಾರ್ಯ**, C/o ಶ್ರೀ ಸತೀಶ್ (ಜ್ಯುಯೆಲರ್ಸ್), ೧೮೦, ೧೧ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು - ೧೯. ದೂರವಾಣಿ: ೯೪೪೮೫೨೨೦೬೭.

ವಿ.ಸೂ: ಸ್ಕಂಧ ೭ ರಿಂದ ೧೨ರ ವರೆಗಿನ ಸಂಗ್ರಹಾನುವಾದವನ್ನೊಳಗೊಂಡ ಮುಂದಿನ ಸಂಪುಟ ಮುದ್ರಣದಲ್ಲಿದ್ದು ಅದಕ್ಕೆ ಆರ್ಥಿಕಸಹಾಯದ ಅಗತ್ಯವಿದೆ. ಆಸಕ್ತರು ಮೇಲ್ಕಂಡ ವಿಳಾಸಕ್ಕೆ ತಮ್ಮ ನೆರವನ್ನು ಸಲ್ಲಿಸಬಹುದು ಎಂಬುದಾಗಿ ಅನುವಾದಕರು ಮನವಿ ಮಾಡಿರುವರು.

**೨)‘ಅಪರೋಕ್ಷಜ್ಞಾನಿಯತಿವರೇಣ್ಯ ಶ್ರೀ ಸತ್ಯಧರ್ಮತೀರ್ಥರು** (ಶ್ರೀಕ್ಷೇತ್ರ **ಬಾಳೆಹೊನ್ನೂರು)’,** ಲೇಖಕರು: ಡಾ.ಎಸ್. ಹನುಮಂತ ಜೋಯಿಸ್, ನಿವೃತ್ತ ಪ್ರಾಚಾರ್ಯರು, ಮನೆ ನಂ ೬೭/೧, ಸಿ-ಬ್ಲಾಕ್, ಗೋಣಿಬಸಪ್ಪ ಕಟ್ಟಡಗಳು, ಗೋಪಾಲಗೌಡ ಬಡಾವಣೆ, ಶಿವಮೊಗ್ಗ - ೫೭೭೨೦೫, ಫೋನ್: ೦೮೧೮೨-೨೫೦೩೯೨, ಮೊ: ೯೪೫೩೩೧೭೭೦, ಪುಟಗಳು: ೧೩೭, ಬೆಲೆ: ರೂ.೧೦೦.

*****

## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

**ಈ ವರ್ಷ ನಮ್ಮ ಪ್ರತಿಷ್ಠಾನದಿಂದ ಪ್ರಕಾಶನಗೊಳ್ಳಲಿರುವ ಕೃತಿಗಳು:**

೧) **ಶ್ರೀಹರಿಕಥಾಮೃತಸಾರ -**
ಶ್ರೀಕಮಲಾಪತಿದಾಸರ ವ್ಯಾಖ್ಯಾನದೊಂದಿಗೆ (ಶ್ರೀಜಗನ್ನಾಥದಾಸರ ದ್ವಿಶತಮಾನೋತ್ಸವದ ಸ್ಮಾರಕ ಪ್ರಕಾಶನ)

೨) **ಸರ್ವಮೂಲಸೌರಭ**
(ಸರ್ವಮೂಲಗ್ರಂಥಗಳ ಪರಿಚಯಾತ್ಮಕವಾದ ಕೃತಿ)

೩) **ಯತಿಧರ್ಮಪ್ರದೀಪ**
(ಅನೇಕ ಆಕರಗ್ರಂಥಗಳಿಂದ ಸನ್ಯಾಸದ ವಿಧಿವಿಧಾನ, ಯತಿಗಳ ನಿತ್ಯಾಹ್ನಿಕ, ವಿಶೇಷಕರ್ತವ್ಯ, ಚಾತುರ್ಮಾಸ್ಯವಿಧಿ ಮೊದಲಾದ ವಿವರಗಳ ಸಂಕಲನ)

೪) **ಸಂಗ್ರಹರಾಮಾಯಣ**
(ಶ್ರೀನಾರಾಯಣಪಂಡಿತರ ಸಮಗ್ರಕೃತಿ - ಸಂಸ್ಕೃತ ಮೂಲ ಹಾಗೂ ವಿವರಣಾತ್ಮಕ ಟಿಪ್ಪಣಿಗಳೊಂದಿಗೆ)

೫) **ಬಳಿತ್ಥಾಸೂಕ್ತ**
(ಶ್ರೀರಾಮ, ಕೃಷ್ಣ, ವೇದವ್ಯಾಸಪರ ಹಾಗೂ ಹನುಮದ್ಭೀಮ ಮಧ್ವಪರವಾದ ವಿಶೇಷಾರ್ಥಗಳುಳ್ಳ ಕನ್ನಡಾನುವಾದ ಸಮೇತ- ಚತುರ್ಥಾವೃತ್ತಿ)

೬) **ಮಧ್ವಭಾರತ**
(ಸಮಗ್ರ ಮಹಾಭಾರತತಾತ್ಪರ್ಯನಿರ್ಣಯದ ಕನ್ನಡ ಸಾರ)

೭) **ಶ್ರೀವಾದಿರಾಜಕೃತಿಮಂಜರೀ**
(ಶ್ರೀವಾದಿರಾಜರ ಜೀವನ, ಕೃತಿಗಳ ಪರಿಚಯ)

೮) **ಪಾಜಕದ ಗಂಟೆ**
(ಶ್ರೀ ಸು.ರಂ.ಎಕ್ಕುಂಡಿ ಅವರ ಕೃತಿ)

೯) **ಶ್ರೀ ವಿಜಯದಾಸರು ಮತ್ತು ಅವರ ಕೃತಿಗಳು**

*****



# ಮಾಸದ ವಿಶೇಷಗಳು

**ಕಾರ್ತಿಕ-ಕೃಷ್ಣಪಕ್ಷ (ಮಾಸನಿಯಾಮಕ: ಇಂದಿರಾ-ದಾಮೋದರ)**

೧೨.೧೧.೦೯: ದಶಮೀ ಹರಿವಾಸರ ರಾತ್ರಿ ೧೦.೧೫ ರ ನಂತರ
೧೩.೧೧.೦೯: **ಸಕಲವೈಷ್ಣವರಿಗೂ ಏಕಾದಶೀ**
೧೬.೧೧.೦೯: ದರ್ಶ, ವೃಶ್ಚಿಕಸಂಕ್ರಮಣ

**ಮಾರ್ಗಶೀರ್ಷ - ಶುಕ್ಲಪಕ್ಷ (ಮಾಸನಿಯಾಮಕ: ಶ್ರೀ-ಕೇಶವ)**

೧೮.೧೧.೦೯: ಚಂದ್ರದರ್ಶನ
೨೨.೧೧.೦೯: ಸ್ಕಂದಷಷ್ಠೀ
೨೩.೧೧.೦೯: ವಿಷ್ಣುಪಂಚಕವ್ರತ
೨೫.೧೧.೦೯: ದುರ್ಗಾಷ್ಟಮೀ, ಭೀಮಜಯಂತೀ
೨೮.೧೧.೦೯: **ಸರ್ವರಿಗೂ ಏಕಾದಶೀ, ಗೀತಾಜಯಂತೀ**
೩೦.೧೧.೦೯: ಹನುಮದ್ವ್ರತ, ಸಾತೇನಹಳ್ಳಿ ಶ್ರೀಶಾಂತೇಶಕಾರ್ತಿಕೋತ್ಸವ,
೦೧.೧೨.೦೯: ದತ್ತಾತ್ರೇಯಜಯಂತೀ, ವಿಷ್ಣುಪಂಚಕವ್ರತ,
ಶ್ರೀಚನ್ನಕೇಶವರಥೋತ್ಸವ (ಮಣೂರು)

**ಮಾರ್ಗಶೀರ್ಷಮಾಸ - ಕೃಷ್ಣಪಕ್ಷ**

೧೨.೧೨.೦೯: **ಸರ್ವರಿಗೂ ಏಕಾದಶೀ**
೧೬.೧೨.೦೯: ದರ್ಶ, ಧನುಃಸಂಕ್ರಮಣ, ವಿಷ್ಣುಪಂಚಕವ್ರತ

**ಪುಷ್ಯಮಾಸ-ಶುಕ್ಲಪಕ್ಷ (ಮಾಸನಿಯಾಮಕ: ಲಕ್ಷ್ಮೀ-ನಾರಾಯಣ)**

೧೭.೧೨.೦೯: ಧನುರ್ಮಾಸಾರಂಭ, ಚಂದ್ರದರ್ಶನ
೨೦.೧೨.೦೯: ವಿಷ್ಣುಪಂಚಕವ್ರತ
೨೮.೧೨.೦೯: **ಸರ್ವರಿಗೂ ಏಕಾದಶೀ, ವೈಕುಂಠೈಕಾದಶೀ**
೨೯.೧೨.೦೯: **ಮುಕ್ಕೋಟಿದ್ವಾದಶೀ**
೩೧.೧೨.೦೯: ಚಂದ್ರಗ್ರಹಣ, ವಿಷ್ಣುಪಂಚಕವ್ರತ, ಮಾಘಸ್ನಾನಾರಂಭ

**(ವಿ.ಸೂ. ೩೧.೧೨.೦೯ರಂದು ಸಂಭವಿಸುವ ಚಂದ್ರಗ್ರಹಣದ ಬಗ್ಗೆ ಹೆಚ್ಚಿನ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು).**

## ಗುರುಗಳ ಪುಣ್ಯದಿನಗಳು

೧೫.೧೧.೦೯: ಶ್ರೀಪದ್ಮನಾಭತೀರ್ಥರು, ನವವೃಂದಾವನ
೧೬.೧೧.೦೯: ಶ್ರೀಮೇಧಾನಿಧಿತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ
ಶ್ರೀಮಹಿಪತಿದಾಸರು (ಕಾಖಂಡಕಿ)
೧೭.೧೧.೦೯: ಶ್ರೀರಘುವೀರತೀರ್ಥರು (ಕೂಡಲಿ ಅಕ್ಷೋಭ್ಯತೀರ್ಥಮಠ)
೧೯.೧೧.೦೯: ಶ್ರೀಕಂಬಾಲೂರುರಾಮಚಂದ್ರತೀರ್ಥರು, ರಾಯವೇಲೂರು
೨೧.೧೧.೦೯: ಶ್ರೀಸಂಕರ್ಷಣ ಒಡೆಯರು (ಕರಂಪೂಂಡಿ)
೨೬.೧೧.೦೯: ಶ್ರೀವಿದ್ಯಾವಲ್ಲಭತೀರ್ಥರು (ವ್ಯಾ.ಮ.), ತಿರುಮಕೂಡಲು
೨೭.೧೧.೦೯: ಶ್ರೀವಿಬುಧೇಂದ್ರತೀರ್ಥರು (ರಾ.ಮ.), ತಿರುನೆಲ್ವೇಲಿ,
ಶ್ರೀಸತ್ಯನಿಧಿತೀರ್ಥರು (ಉ.ಮ.), ಕರ್ನೂಲ್
೨೮.೧೧.೦೯: ಶ್ರೀಸತ್ಯನಾಥತೀರ್ಥರು (ಉ.ಮ.), ವೀರಚೋಳಪುರ
೩೦.೧೧.೦೯: ಶ್ರೀಲಕ್ಷ್ಮೀವಲ್ಲಭತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ
೦೨.೧೨.೦೯: ಶ್ರೀಸುಗುಣೇಂದ್ರತೀರ್ಥರು (ರಾ.ಮ.), ಚಿತ್ತೂರು
ಶ್ರೀಲಕ್ಷ್ಮೀಧರತೀರ್ಥರು (ಶ್ರೀಪಾ.ಮ.)
ಶ್ರೀವಿದ್ಯಾಪ್ರಸನ್ನತೀರ್ಥರು (ವ್ಯಾ.ಮ.), ಸೋಸಲೆ
೦೩.೧೨.೦೯: ಶ್ರೀರಘುನಾಥತೀರ್ಥರು (ಉ.ಮ.), ಮಳಖೇಡ
೦೬.೧೨.೦೯: ಶ್ರೀಅಕ್ಷೋಭ್ಯತೀರ್ಥರು, ಮಳಖೇಡ
೦೯.೧೨.೦೯: ಶ್ರೀಉಪೇಂದ್ರತೀರ್ಥರು (ರಾ.ಮ.), ಶ್ರೀರಂಗ
೧೪.೧೨.೦೯: ಶ್ರೀದಯಾನಿಧಿತೀರ್ಥರು (ಶ್ರೀಪಾ.ಮ.), ಮುಳಬಾಗಿಲು
೧೬.೧೨.೦೯: ಶ್ರೀಜಿತಾಮಿತ್ರತೀರ್ಥರು (ರಾ.ಮ.), ಕೃಷ್ಣಾನಡುಗಡ್ಡೆ
೧೮.೧೨.೦೯: ಶ್ರೀಜಗನ್ನಾಥತೀರ್ಥರು (ವ್ಯಾ.ಮ.), ಕುಂಭಘೋಣ
ಶ್ರೀಸುಯಮೀಂದ್ರತೀರ್ಥರು (ರಾ.ಮ.)
೨೦.೧೨.೦೯: ಶ್ರೀಶ್ರೀನಾಥತೀರ್ಥರು (ವ್ಯಾ.ಮ.), ತಿರುಮಕೂಡಲು
೨೧.೧೨.೦೯: ಶ್ರೀಲಕ್ಷ್ಮೀವಲ್ಲಭತೀರ್ಥರು (ವ್ಯಾ.ಮ.), ಬೇಲೂರು
೨೭.೧೨.೦೯: ಶ್ರೀಆದಿರಾಜತೀರ್ಥರು (ಶ್ರೀಪಾ.ಮ.), ಶ್ರೀರಂಗ
ಶ್ರೀಗುಣಸಾರನಿಧಿತೀರ್ಥರು (ಶ್ರೀಪಾ.ಮ.), ಮುಳಬಾಗಿಲು
ಶ್ರೀಯಶೋನಿಧಿತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ
೨೮.೧೨.೦೯: ಶ್ರೀರಘೂತ್ತಮತೀರ್ಥರು (ಉ.ಮ.), ತಿರುಕ್ಕೋಯಿಲೂರು
೩೧.೧೨.೦೯: ಶ್ರೀಲಕ್ಷ್ಮೀಮನೋಹರತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ



## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

೧೪.೧೧.೦೯ ಹಾಗೂ ೧೫.೧೧.೦೯ ಸಂಜೆ ೬.೩೦ ಘಂಟೆಗೆ ಪ್ರವಚನ
ವಿಷಯ: **ಸಾವಿತ್ರ್ಯುಪಾಖ್ಯಾನ**
ಸ್ಥಳ: ಮಾಧ್ವಸಂಘ, ವಿಜಯನಗರ, ಬೆಂಗಳೂರು

೧೬.೧೧.೦೯ ರಿಂದ ೨೨.೧೧.೦೯ರವರೆಗೆ ಸಂಜೆ ೬.೩೦ ಘಂಟೆಗೆ ಪ್ರವಚನ
ವಿಷಯ: **ಮಹಾಭಾರತ - ಭೀಷ್ಮಪರ್ವ**
ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳ ಮಠ, ಬಾಗಲಿಂಗಂಪಲ್ಲಿ, ಹೈದರಾಬಾದ್

೩೦.೧೧.೦೯ ರಿಂದ ೦೬.೧೨.೦೯ರವರೆಗೆ ಸಂಜೆ ೬.೩೦ ಘಂಟೆಗೆ ಪ್ರವಚನ
ವಿಷಯ: **ಭಾಗವತ**
ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳ ಮಠ, ಜವಹರ ನಗರ, ರಾಯಚೂರು

೧೩-೧೨-೦೯, ಮಧ್ಯಾಹ್ನ ೨.೪೫ ಘಂಟೆಗೆ ವಿಚಾರಸಂಕಿರಣ
ವಿಷಯ: **ಮಾಧ್ವಪರಂಪರೆಯ ಯತಿಶೇಖರರು**
ಸ್ಥಳ: ವಿಜಯಭಾರತಿ ಪ್ರೌಢಶಾಲೆ, ಗಿರಿನಗರ, ಬೆಂಗಳೂರು

*****

### ಶ್ರೀವ್ಯಾಸಮಧ್ವ ಮಾಸಪತ್ರಿಕೆ

ಶ್ರೀವ್ಯಾಸಮಧ್ವ ಮಾಸಪತ್ರಿಕೆಯು ಮಾರ್ಚ್ ೨೦೦೮ ರಿಂದ ಪ್ರಕಾಶನಗೊಳ್ಳುತ್ತಿದೆ. ಶ್ರೀಪಾದರ ಲೇಖನಗಳು, ಬಗೆಬಗೆಯ ಅಪೂರ್ವ ಚಿತ್ರಗಳು, ಮಾಸದ ವಿಶೇಷಗಳು, ಭಗವದ್ರೂಪಗಳ, ಭಗವದ್ಭಕ್ತರ ಚರಿತ್ರೆಗಳು, ವ್ರತ ಉಪವಾಸಗಳ ವಿವರಗಳು, ಜ್ಞಾನಿಗಳ ಕೃತಿಗಳ ಪರಿಚಯ, ಹರಿದಾಸರ ಕೃತಿಗಳ ಬಗ್ಗೆ ಮಾಹಿತಿ ಮೊದಲಾದ ಅನೇಕ ಉಪಯುಕ್ತ ಲೇಖನಗಳಿಂದಾಗಿ ಈಗಾಗಲೇ ಗಣನೀಯ ಸಂಖ್ಯೆಯ ಓದುಗರ ಬಳಗವನ್ನು ಪತ್ರಿಕೆ ಹೊಂದಿದೆ.

ಅನೇಕ ಆಸ್ತಿಕ ಮಹನೀಯರು ಪೋಷಕರು ಮೊದಲಾದ ರೂಪದಲ್ಲಿ ಪತ್ರಿಕೆಯ ಪ್ರಕಾಶನಕ್ಕೆ ನೆರವಾಗುತ್ತಿದ್ದಾರೆ. ಇನ್ನೂ ಅನೇಕರು ತಮ್ಮಿಂದ ಸಾಧ್ಯವಾದ ರೀತಿಯಲ್ಲಿ ನೆರವು ನೀಡಲು ಮುಂದಾಗಿರುವರು. ಅದಕ್ಕೆ ಸಲಹೆ ಹೀಗಿದೆ.

ಈಗಾಗಲೇ ಚಂದಾದಾರರಾಗಿರುವವರು ಕನಿಷ್ಠ ಇನ್ನೊಬ್ಬ ಚಂದಾದಾರರನ್ನು ಒದಗಿಸಿಕೊಟ್ಟಲ್ಲಿ ಪತ್ರಿಕೆ ಇನ್ನು ಹೆಚ್ಚು ಉಪಯುಕ್ತರೀತಿಯಲ್ಲಿ ಪ್ರಕಾಶನಗೊಳ್ಳಲು ಸಾಧ್ಯವಾಗುತ್ತದೆ. ಈ ಬಗ್ಗೆ ಉತ್ತಮ ಪ್ರತಿಕ್ರಿಯೆಯನ್ನು ಪತ್ರಿಕೆ ನಿರೀಕ್ಷಿಸುತ್ತದೆ.

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

## ಮತ್ತೊಮ್ಮೆ ಕನ್ನಡ ಲಿಪಿಯಲ್ಲಿ ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ ಸರ್ವಮೂಲಗ್ರಂಥಗಳ ಪ್ರಕಾಶನ

ನಮ್ಮ ಪ್ರತಿಷ್ಠಾನವು ಸರ್ವಮೂಲಗ್ರಂಥಗಳನ್ನು ಈ ಹಿಂದೆ ೨೦೦೨ರಲ್ಲಿ ಮೊದಲ ಬಾರಿಗೆ ಸಮಗ್ರವಾಗಿ ಕನ್ನಡಲಿಪಿಯಲ್ಲಿ ಪ್ರಕಾಶನಪಡಿಸಿತ್ತು. ಈಗ ಎಲ್ಲ ಪ್ರತಿಗಳು ಮುಗಿದು ಆಸಕ್ತರಿಂದ ಬಹಳವಾಗಿ ಬೇಡಿಕೆ ಬರುತ್ತಿರುವುದರಿಂದ ಎರಡನೆಯ ಬಾರಿಗೆ ಪ್ರಕಾಶನ ಪಡಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಆಸಕ್ತರು ಪ್ರಕಾಶನಪೂರ್ವ ಬೆಲೆಯನ್ನು ನೀಡಿ ಪ್ರತಿಗಳನ್ನು ಕಾದಿರಿಸಬಹುದು. ಸಮಗ್ರ ಸರ್ವಮೂಲಗ್ರಂಥಗಳು ಡಿಸೆಂಬರ್ ೨೦೦೯ರಲ್ಲಿ ಬಿಡುಗಡೆಯಾಗಲಿವೆ.

**ಸಂಪಾದಕರು:**

**ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

**ಸರ್ವಮೂಲಗ್ರಂಥಗಳ ಬಿಡುಗಡೆಯ ದಿನಾಂಕ ಹಾಗೂ ಸ್ಥಳವನ್ನು 'ಶ್ರೀವ್ಯಾಸಮಧ್ವ' ಪತ್ರಿಕೆಯ ಡಿಸೆಂಬರ್ ೨೦೦೯ ಸಂಚಿಕೆಯಲ್ಲಿ ತಿಳಿಸಲಾಗುವುದು.**

ವಿ.ಸೂ: ರೂ. ೧೫,೦೦೦/- ನೀಡಿ ನಮ್ಮ ಪ್ರತಿಷ್ಠಾನಕ್ಕೆ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಸುಮಧ್ವವಿಜಯ, ಹರಿಕಥಾಮೃತಸಾರ, ಮಹಾಭಾರತತಾತ್ಪರ್ಯನಿರ್ಣಯ ಮೊದಲಾಗಿ ಹಿಂದೆ ಪ್ರಕಾಶಿತವಾದ ಹಾಗೂ ಮುಂದೆ ಪ್ರಕಾಶನಗೊಳ್ಳುವ ಎಲ್ಲ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.


॥ ಹರಿ ಸರ್ವೋತ್ತಮ ॥ ॥ ಶ್ರೀ ವಾಯು ಜೀವೋತ್ತಮ ॥

**Sri Guru Raghavendra Real Estate**

No. 66, 1st Floor, 2nd A Cross, 3rd main,
Srinivasanagar, Bangalore - 560050. Ph: 9341259590

**Consultants for**

BDA Sites, Houses, Sale/Purchase, B.S.K. 6th Stage, Vishveshwaraiah Layout, Anjanapura and other BDA approved Layouts, (Bangalore South).

We also help you in obtaining Khata Cerificate, Tax paid, Building plans from B.B.M.P., B.D.A. and also contact for Registration, Gift Deed and other allied services.

**Contact :** Nagaraj, **Mob:** 9341259590


# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)


Website: www.vyasamadhwa.org Ph:26602802 Email: info@vyasamadhwa.org


## ಸಂಸ್ಥೆಯ ಪ್ರಮುಖ ಯೋಜನೆಗಳು

೧) ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨) ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩) 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪) 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫) ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬) ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವ-ಸೇವಾಪ್ರಶಸ್ತಿ'.

೭) ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮) ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯) ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

ವಿಶೇಷ ಸೂಚನೆ : ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.